

State Council of Educational Research & Training
Andhra Pradesh

ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆ
ಆಂಧ್ರಪ್ರದೇಶ್

Social Science

Our Pasts

8th Class

# Social Science
# ಸಮಾಜ ವಿಜ್ಞಾನ
# OUR PASTS
# ನಮ್ಮ ಗತಕಾಲ

8

ENGLISH - KANNADA VERSION

विद्यया ऽमृतमश्नुते

एन सी ई आर टी
NCERT

0864



Free distribution by Samagra Shiksha, Government of Andhra Pradesh

https://amaravathiteacher.com

# ಭಾರತದ ಸಂವಿಧಾನ

ಸತ್ಯಮೇವ ಜಯತೆ

## ನಮ್ಮ ಸಂವಿಧಾನದ ಪ್ರಸ್ತಾವನೆ

ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಜಾತ್ಯಾತೀತ, ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರಚಿಸಲು ಮತ್ತು ಅದರ ಸಮಸ್ತ ಪೌರರಿಗೆ ; ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ; ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು ಉಪಾಸನೆಯ ಸ್ವಾತಂತ್ರ್ಯ ; ಸ್ಥಾನಮಾನ ಮತ್ತು ಅವಕಾಶ ಸಮಾನತೆ ; ಹಾಗೂ ಇವುಗಳು ದೊರೆಯುವಂತೆ ಮಾಡಲು ; ವ್ಯಕ್ತಿ ಗೌರವವನ್ನು, ರಾಷ್ಟ್ರದ ಏಕತೆ ಮತ್ತು ಸಮಗ್ರತೆಯನ್ನು ಸುನಿಶ್ಚಿತಗೊಳಿಸಿ ಅವರಲ್ಲಿ ಭ್ರಾತೃಭಾವನೆಯನ್ನು ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿ ; ನಮ್ಮ ಸಂವಿಧಾನ ಸಭೆಯಲ್ಲಿ 1949ನೆಯ ಇಸವಿಯ ನವೆಂಬರ್ 30ಗಳ 26ನೇ ದಿನದಂದು ದೃಢಸಂಕಲ್ಪ ಮಾಡಿ, ಈ ಸಂವಿಧಾನವನ್ನು ಅಂಗೀಕರಿಸಿ, ನಮಗೆ ನಾವೇ ಶಾಸನವಾಗಿ ಅರ್ಪಿಸಿಕೊಂಡಿದ್ದೇವೆ.

## ಭಾರತ ಸಂವಿಧಾನ - ಮೂಲಭೂತ ಕರ್ತವ್ಯಗಳು

1. ಸಂವಿಧಾನವನ್ನು ಅನುಸರಿಸುವುದು ಹಾಗು ಅದರ ಆದರ್ಶಗಳನ್ನು, ಸಂಸ್ಥೆಗಳನ್ನು, ರಾಷ್ಟ್ರ ಧ್ವಜ ಮತ್ತು ರಾಷ್ಟ್ರ ಗೀತೆಯನ್ನು ಗೌರವಿಸುವುದು.
2. ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾಗಿದ್ದ ಉದಾತ್ತ ಆದರ್ಶಗಳನ್ನು ಗೌರವಿಸುವುದು.
3. ಭಾರತದ ಸಾರ್ವಭೌಮತ್ವವನ್ನು, ಐಕ್ಯತೆಯನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುವುದು ಹಾಗು ಸಂರಕ್ಷಿಸವುದು.
4. ದೇಶವನ್ನು ರಕ್ಷಿಸುವುದು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಸೇವೆ ಸಲ್ಲಿಸುವುದು.
5. ಧರ್ಮ, ಬಾಷೆ, ಪ್ರಾದೇಶಿಕ ಹಾಗು ಜಾತಿ ಪಂಗಡಗಳ ಭಿನ್ನತೆಯಿಂದ ಅತೀವವಾಗಿ ಭಾರತದ ಎಲ್ಲಾ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಸಮಾನ ಭ್ರಾತೃತ್ತವದ ಭಾವನೆಯನ್ನು ಬೆಳೆಸುವುದು ಹಾಗು ಗೌರವಕ್ಕೆ ಭಂಗತರುವ ಆಚರಣೆಗಳನ್ನು ಬಿಟ್ಟು ಬಿಡುವುದು.
6. ನಮ್ಮ ಸಮ್ಮಿಶ್ರ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.
7. ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯ ಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗು ಅಭಿವೃದ್ಧಿಗೊಳಿಸುವುದು ಮತ್ತು ಪ್ರಾಣಿಗಳಿಗೆ ಅನುಕಂಪ ತೋರಿಸುವುದು.
8. ವೈಜ್ಞಾನಕ ಮನೋಭಾವನೆ, ಮಾನವೀಯತೆ, ಜಿಜ್ಞಾಸೆಯ ಮತ್ತು ಸುಧಾರಣೆಯ ಪ್ರವೃತ್ತಿಯನ್ನು ಅಭಿವೃದ್ಧಿ ಗೊಳಿಸುವುದು.
9. ಸಾರ್ವಜನಕಿ ಸ್ವತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.
10. ರಾಷ್ಟ್ರವು ನಿರಂತರವಾಗಿ ಸಾಧನೆಯ ಮತ್ತು ಸಿದ್ಧಿಯ ಉನ್ನತ ಮಟ್ಟಗಳನ್ನು ತಲುಪಲು ವೈಯಕ್ತಿಕ ಹಾಗು ಸಾಮೂಹಿಕ ಚಟುವಟಿಕೆಯ ಎಲ್ಲಾ ಕಾರ್ಯಕ್ಷೇತ್ರದ ಉನ್ನತಿಗಾಗಿ ಶ್ರಮಿಸುವುದು.
11. ಮಕ್ಕಳ ತಂದೆತಾಯಿಗಳು/ ಪೋಷಕರು 6 ರಿಂದ 14 ವರ್ಷದೊಳಿಗಿನ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

ಭಾಗ -IV A (ಅನುಚ್ಛೇದ 51 A)

## ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ (RTE) - 2009

6 ರಿಂದ 14 ವರ್ಷಗಳ ವಯಸ್ಸಿನ ಮಕ್ಕಳಗೆಲ್ಲಾ ಉಚಿತ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡಲು ಉದ್ದೇಶಿಸಲಾಗಿದೆ, ಇದು ಏಪ್ರಿಲ 1, 2010 ರಿಂದ ಜಾರಿಗೆ ಬಂದಿತು.

**ಕಾನೂನಿನಲ್ಲಿ ಮುಖ್ಯಾಂಶಗಳು :**

- ಮಕ್ಕಳಿಗೆಲ್ಲರಿಗೂ ಹತ್ತಿರದಲ್ಲಿ ಪಾಠಶಾಲೆಗಳನ್ನು ಏರ್ಪಾಟು ಮಾಡಬೇಕು.
- ಪಾಠಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು.
- ಮಕ್ಕಳೆಲ್ಲರನ್ನು ವಯಸ್ಸಿಗೆ ಅನುಗುಣವಾಗಿ ತರಗತಿಯಲ್ಲಿ ಸೇರಿಸಬೇಕು.
- ಮಯಸ್ಸಿಗೆ ತಕ್ಕ ತರಗತಿಯಲ್ಲಿ ಸೇರಿದ ನಂತರ ಸಹ ವಿದ್ಯಾರ್ಥಿಗಳೊಂದಿಗೆ ಸಮಾನವಾಗಿ ಇರುವುದಕ್ಕೆ ಪ್ರತ್ಯೇಕ ತರಬೇತಿಯನ್ನು ನೀಡಬೇಕು.
- ಪ್ರತ್ಯೇಕ ಅಗತ್ಯಗಳು ಇರುವ ಮಕ್ಕಳಿಗೆ ಸಾಧಾರಣ ಮಕ್ಕಳೊಂದಿಗೆ ಶಿಕ್ಷಣ ಪಡೆಯಲು ತಕ್ಕ ವಸತಿಗಳು ಏರ್ಪಾಟು ಮಾಡಬೇಕು.
- ಶಾಲೆಯಲ್ಲಿ ದಾಖಲಾತಿಗೆ ಯಾವ ರೀತಿಯ ಪರೀಕ್ಷೆಗಳು ನಿರ್ವಹಿಸಬಾರದು. ಯಾವ ರೀತಿಯ ಶುಲ್ಕ ಮತ್ತು ಚಾರ್ಜ್‌ಗಳನ್ನು ವಸೂಲು ಮಾಡಬಾರದು.
- ಶಾಲೆಯಲ್ಲಿ ದಾಖಲಾದ ಮಕ್ಕಳ ಹೆಸರನ್ನು ತೆಗೆದು ಹಾಕುವುದು. ಅದೇ ತರಗತಿಯಲ್ಲಿ ಇರುವಂತೆ ಮಾಡಬಾರದು.
- ಮಕ್ಕಳನ್ನು ಶಾರೀರಿಕವಾಗಿ, ಮಾನಸಿಕವಾಗಿ ಹಿಂಸಿಸಬಾರದು..
- ಮಕ್ಕಳು ನಿರ್ದೇಶಿಸಿದ ಸಾಮರ್ಥ್ಯಗಳು ಸಾಧಿಸುವಂತೆ ಭೋಧನಾಭ್ಯಸನ ಮೌಲ್ಯಮಾಪನ ಇರಬೇಕು.
- ಪ್ರಾಥಮಿಕ ಶಿಕ್ಷಣ ಪೂರ್ಣವಾಗುವವರೆಗೆ ಮಕ್ಕಳಿಗೆ ಎಂತಹ ಬೋರ್ಡ್ ಪರೀಕ್ಷೆಗಳು ನಿರ್ವಹಿಸಬಾರದು.
- ಹದಿನಾಲ್ಕು ವರ್ಷಗಳು ಪೂರ್ತಿಯಾಗಿದ್ದರೂ, ಪ್ರಾಥಮಿಕ ಶಿಕ್ಷಣ ಪೂರ್ತಿಯಾಗುವವರೆಗೆ ಶಾಲೆಯಲ್ಲಿ ಮಕ್ಕಳು ಶಿಕ್ಷಣ ಮುಂದುವರೆಸಬಹುದು.
- ಪ್ರಾಥಮಿಕ ಶಿಕ್ಷಣ ಪೂರ್ಣವಾಗುವವರೆಗೆ ಮಕ್ಕಳಿಗೆ ಎಂತಹ ಬೋರ್ಡ್ ಪರೀಕ್ಷೆಗಳು ನಿರ್ವಹಿಸಬಾರದು.
- ಹದಿನಾಲ್ಕು ವರ್ಷಗಳು ಪೂರ್ತಿಯಾಗಿದ್ದರೂ, ಪ್ರಾಥಮಿಕ ಶಿಕ್ಷಣ ಪೂರ್ತಿಯಾಗುವವರೆಗೆ ಶಾಲೆಯಲ್ಲಿ ಮಕ್ಕಳು ಶಿಕ್ಷಣ ಮುಂದುವರೆಸಬಹುದು.
- ಹಿಂದುಳಿದ ವರ್ಗಗಳಿಗೆ, ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸುತ್ತಿರುವ ವರ್ಗಕ್ಕೆ ಸೇರಿದ ಮಕ್ಕಳು ಯಾವುದೇ ಭೇದಭಾವಕ್ಕೆ ಗುರಿಯಾಗದಂತೆ ನೋಡಬೇಕು.
- ಸಂವಿಧಾನದಲ್ಲಿ ಅಳವಡಿಸಲಾದ ಮೌಲ್ಯಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳಿಗೆ ಭಯ, ಆಂದೋಳನೆಗೆ ಗುರಿಯಾಗದ ರೀತಿಯಲ್ಲಿ ಅವರ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸುವ ಪಾಠ್ಯಾಂಶವನ್ನು ರೂಪಿಸಬೇಕು.

https://amaravathiteacher.com

# Contents

## Semester - 1

1. How, When and Where -12
ಹೇಗೆ, ಯಾವಾಗ - ಎಲ್ಲಿ
2. From Trade to Territory The Company Establishes Power -28
ವ್ಯಾಪಾರ ವಸಾಹತುಗಳಿಂದ ಹಿಡಿದು ಸಾಮ್ರಾಜ್ಯದ ಸ್ಥಾಪನೆವರೆಗೆ ಕಂಪನಿ ಅಧಿಕಾರದ ಸ್ಥಾಪನೆ
3. Ruling the Countryside -62
ಗ್ರಾಮೀಣ ಪ್ರಾಂತಗಳ ಆಡಳಿತ
4. Tribals, *Dikus* and the Vision of a Golden Age -88
ಆದಿವಾಸಿಗಳು, ದಿಕುಗಳು - ಒಂದು ಸುವರ್ಣಯುಗದ ವೀಕ್ಷಣೆ
5. When People Rebel 1857 and After -112
1857 ರ ಮಹಾದಂಗೆಯ ನಂತರದ ಪರಿಣಾಮಗಳು

## Semester - 2

6. Weavers, Iron Smelters and Factory Owners -140
ನೇಕಾರರು, ಕಬ್ಬಿಣ ಶುದ್ಧಿ ಮಾಡುವವರು ಮತ್ತು ಕಾರ್ಖಾನೆ ಮಾಲಿಕರು
7. Civilising the "Native", Educating the Nation -172
"ಸ್ಥಳೀಯ"ರನ್ನು ನಾಗರಿಕರಾಗಿ ಮಾಡುವುದು, ದೇಶಕ್ಕೆ ಶಿಕ್ಷಣವನ್ನು ಒದಗಿಸುವುದು
8. Women, Caste and Reform -198
ಮಹಿಳೆಯರು, ಜಾತಿಗಳು - ಸಂಸ್ಕರಣೆಗಳು
9. The Making of the National Movement: 1870s–1947 -228
ಭಾರತ ರಾಷ್ಟ್ರೀಯ ಚಳುವಳಿ : 1870--1947
10. India After Independence -266
ಸ್ವಾತಂತ್ರ್ಯದ ನಂತರ ಭಾರತದೇಶ



X3G4S1
**Teacher Corner**

H7P2W6
**Student Corner**

https://amaravathiteacher.com

# 1 ಹೇಗೆ, ಯಾವಾಗ ಮತ್ತು ಎಲ್ಲಿ

V7V5L5

## ದಿನಾಂಕಗಳಿಗೆ ಎಷ್ಟು ಪ್ರಾಧಾನ್ಯತೆ ಇದೆ?

ಇತಿಹಾಸಕಾರರು ದಿನಾಂಕಗಳಿಗೆ ಬಹಳ ಪ್ರಾಮುಖ್ಯತೆ ನೀಡುತ್ತಿದ್ದ ಕಾಲವೊಂದಿತ್ತು. ಆಡಳಿತಗಾರರ ಪಟ್ಟಾಭಿಷೇಕ ಮಾಡಿದ ದಿನಾಂಕ ಮತ್ತು ಯುದ್ಧಗಳು ನಡೆದ ದಿನಾಂಕಗಳ ಕುರಿತು ತೀವ್ರವಾದ ಚರ್ಚೆಗಳು ನಡೆಯುತ್ತಿದ್ದವು. ಸಾಮಾನ್ಯ ಅರ್ಥದಲ್ಲಿ ಇತಿಹಾಸ ಎಂದರೆ ದಿನಾಂಕಗಳು ಎಂದು ಭಾವಿಸುತ್ತಾರೆ. ''ಇತಿಹಾಸ ಎಂದರೆ ದಿನಾಂಕಗಳನ್ನು ಕಂಠಪಾಠ ಮಾಡುವುದೇ. ಅದಕ್ಕಾಗಿ ನನಗೆ ಇತಿಹಾಸ ಎಂದರೆ ಇಷ್ಟವಿರುವುದಿಲ್ಲ'' ಎಂದು ಜನರು ಹೇಳುವುದನ್ನು ನೀವು ಕೇಳಿರಬಹುದು. ಅಂತಹ ಕಲ್ಪನೆಯು ಸರಿಯಾದುದೇನಾ?

ಕೆಲವು ಕಾಲಾವಧಿಯಲ್ಲಿ ಸಂಭವಿಸುವ ಬದಲಾವಣೆಗಳ ಕುರಿತು ಇತಿಹಾಸ ಹೇಳುತ್ತದೆ. ಹಿಂದೆ ಹೇಗೆ ಇತ್ತು ಮತ್ತು ಈಗ ಹೇಗೆ ಬದಲಾಗಿದೆ ಎಂಬುದನ್ನು ತಿಳಿದುಕೊಳ್ಳುವುದೇ ಇತಿಹಾಸ. ನಾವು ಭೂತಕಾಲವನ್ನು ವರ್ತಮಾನದೊಂದಿಗೆ ಹೋಲಿಸುವಾಗ ಕಾಲವನ್ನು ಉಲ್ಲೇಖಿಸ ಬೇಕಾಗುತ್ತದೆ. ಆಗ ನಾವು 'ಮೊದಲು' ಮತ್ತು 'ನಂತರ' ಎಂದು ಮಾತನಾಡುತ್ತೇವೆ.

ಜಗತ್ತಿನಲ್ಲಿ ವಾಸಿಸುವ ನಾವು ಸಾಧಾರಣ ಪರಿಸ್ಥಿತಿಗಳನ್ನು ಇತಿಹಾಸಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವುದಿಲ್ಲ. ಇರುವ ಪರಿಸ್ಥಿತಿಗಳನ್ನು ಯಥಾಸ್ಥಿತಿಯಾಗಿ ಸ್ವೀಕರಿಸುತ್ತೇವೆ. ಇವು ಯಾವಾಗಲೂ ಹೀಗೆ ಇರುತ್ತವೆ ಎಂದು ಭಾವಿಸುತ್ತೇವೆ. ಆದರೆ ನಮ್ಮಲ್ಲಿ ಹೆಚ್ಚಿನವರು 'ಅದ್ಭುತಗಳು' ಎಂದು ಭಾವಿಸುವ ಕೆಲವು ಕ್ಷಣಗಳು ಇರುತ್ತವೆ. ನಾವು ಕುತೂಹಲದಿಂದ ಇದ್ದಾಗ ಇತಿಹಾಸಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುತ್ತೇವೆ. ರಸ್ತೆ ಬದಿಯ ಟೀಸ್ಟಾಲ್‌ನಲ್ಲಿ ಯಾರಾದರೂ ಚಹಾ ಕುಡಿಯುವುದನ್ನು ನೋಡಿದಾಗ, ಜನರು ಯಾವಾಗ ಚಹಾ ಮತ್ತು ಕಾಫಿ ಕುಡಿಯಲು ಪ್ರಾರಂಭಿಸಿದರು ಎಂದು ನೀವು ಆಶ್ಚರ್ಯಪಡಬಹುದು? ರೈಲಿನ ಕಿಟಕಿಯಿಂದ ಹೊರಗೆ ನೋಡುವಾಗ ಈ ರೈಲ್ವೆಗಳು ಯಾವಾಗ ನಿರ್ಮಿಸಿದರು ಮತ್ತು ರೈಲ್ವೆಗಳು ಇರದ ಮೊದಲು ಜನರು ದೂರದ ಪ್ರಯಾಣವನ್ನು ಹೇಗೆ ಮಾಡುತ್ತಿದ್ದರು? ಎಂದು ನೀವೇ ಆಲೋಚಿಸಬಹುದು. ಬೆಳಿಗ್ಗೆ ದಿನ ಪತ್ರಿಕೆಯನ್ನು ಓದುವಾಗ ಪತ್ರಿಕೆಗಳು ಮುದ್ರಣಗೊಳ್ಳುವ ಮೊದಲು ಜನರು ಹೇಗೆ ವಿಷಯಗಳನ್ನು ತಿಳಿದುಕೊಳ್ಳುತ್ತಿದ್ದರು ಎನ್ನುವ ಆಲೋಚನೆಗಳು ಬರುತ್ತವೆ.




***ಚಿತ್ರ-1*** *ಬ್ರಾಹ್ಮಣರು ಬ್ರಿಟಾನಿಯಾಗೆ ಶಾಸ್ತ್ರಗಳನ್ನು ನೀಡುತ್ತಿದ್ದಾರೆ. 1782ರಲ್ಲಿ ಜೇಮ್ಸ್ ರೆನ್ನೆಲ್‌ರ ಮೊದಲ ನಕ್ಷೆಯ ಮುಂಭಾಗದ ಮುಖಪುಟದ ಚಿತ್ರ.*

ಹಿಂದೂಸ್ತಾನದ ನಕ್ಷೆಗಳನ್ನು ತಯಾರಿಸಲು ರಾಬರ್ಟ್‌ಕ್ಲೈವ್‌ನು ರೆನ್ನೆಲ್‌ನನ್ನು ಕೇಳಿದನು. ಬ್ರಿಟೀಷರು ಭಾರತವನ್ನು ವಶಪಡಿಸಿಕೊಳ್ಳಲು ಹಾಗೂ ಪ್ರಾಬಲ್ಯದ ಪ್ರಕ್ರಿಯೆಗೆ ನಕ್ಷೆಗಳ ತಯಾರಿಕೆಯು ಅತ್ಯಗತ್ಯವೆಂದು ರೆನ್ನೆಲ್ ಭಾವಿಸಿದನು. ಇಲ್ಲಿರುವ ಚಿತ್ರವು ಭಾರತೀಯರು ತಮ್ಮ ಪ್ರಾಚೀನ ಗ್ರಂಥವನ್ನು ಬ್ರಿಟಾನಿಯಾಗೆ ಸ್ವಇಚ್ಛೆಯಿಂದ ನೀಡಿದರು ಎಂದು ಸೂಚಿಸಲು ಪ್ರಯತ್ನಿಸುತ್ತದೆ. ಬ್ರಿಟೀಷ್ ಶಕ್ತಿಯ ಸಂಕೇತವಾಗಿ ಭಾರತೀಯ ಸಂಸ್ಕೃತಿಯನ್ನು ಕಾಪಾಡಬೇಕೆಂದು ನಾವೇ ಬ್ರಿಟೀಷರನ್ನು ಕೇಳಿಕೊಂಡಂತೆ ತೋರಿಸಲ್ಪಟ್ಟಿದೆ.

**ಚಟುವಟಿಕೆ**


ಮೇಲೆ ತಿಳಿಸಿದ ಒಂದು ಚಿತ್ರವನ್ನು ಜಾಗ್ರತೆಯಾಗಿ ಗಮನಿಸಿರಿ. ಈ ಚಿತ್ರವು ಸಾಮ್ರಾಜ್ಯಶಾಹಿ ಕಲ್ಪನೆಯನ್ನು ಹೇಗೆ ಪ್ರತಿಬಿಂಬಿಸುತ್ತದೆ ಎಂದು ವಿವರಿಸುವ ಪ್ಯಾರಾಗ್ರಾಫ್ ಅನ್ನು ಬರೆಯಿರಿ.



https://amaravathiteacher.com

ಇಂತಹ ಎಲ್ಲಾ ಐತಿಹಾಸಿಕ ಪ್ರಶ್ನೆಗಳು ನಮ್ಮನ್ನು ಕಾಲ ಎನ್ನುವ ಕಲ್ಪನೆಗಳಿಗೆ ಹಿಂತಿರುಗಿಸುತ್ತವೆ. ಆದರೆ ಕಾಲವನ್ನು ಒಂದು ನಿರ್ದಿಷ್ಟ ವರ್ಷ ಅಥವಾ ತಿಂಗಳು ಎಂದು ನಿಖರವಾಗಿ ಹೇಳಲಾರೆವು. ಕೆಲವೊಮ್ಮೆ ನಿರ್ದಿಷ್ಟ ಸಮಯದ ಅವಧಿಯಲ್ಲಿ ಸಂಭವಿಸುವ ಪ್ರಕ್ರಿಯೆಗಳಿಗೆ ನಿಖರವಾದ ದಿನಾಂಕಗಳನ್ನು ನಿಗದಿಪಡಿಸುವುದು ತಪ್ಪಾಗುತ್ತದೆ. ಭಾರತದೇಶದಲ್ಲಿ ಜನರು ಚಹಾ ಕುಡಿಯುವುದು ಒಂದು ದಿನದಲ್ಲಿ ಪ್ರಾರಂಭವಾಗಲಿಲ್ಲ. ಅವರು ಕಾಲಾಂತರದಲ್ಲಿ ಅದರ ಅಭಿರುಚಿಯನ್ನು ಬೆಳೆಸಿಕೊಂಡರು. ಅಂತಹ ಪ್ರಕ್ರಿಯೆಗೆ ಯಾವುದೇ ಸ್ಪಷ್ಟ ದಿನಾಂಕವಿರುವುದಿಲ್ಲ. ಅದೇರೀತಿ, ಬ್ರಿಟೀಷರ ಆಳ್ವಿಕೆಯನ್ನು ಸ್ಥಾಪಿಸಿದ ದಿನಾಂಕ ಅಥವಾ ರಾಷ್ಟ್ರೀಯ ಚಳುವಳಿ ಪ್ರಾರಂಭವಾದ ದಿನಾಂಕ ಅಥವಾ ಆರ್ಥಿಕ ಮತ್ತು ಸಮಾಜದಲ್ಲಿ ಬದಲಾವಣೆಗಳು ಸಂಭವಿಸಿದ ದಿನಾಂಕವನ್ನು ನಾವು ನಿಗದಿಪಡಿಸಲು ಸಾಧ್ಯವಿಲ್ಲ. ಈ ಬದಲಾವಣೆಗಳು ಎಲ್ಲಾ ಕೆಲವು ಕಾಲ ಪರಿಮಿತಿಯಲ್ಲಿ ಮಾತ್ರವೇ ಸಂಭವಿಸಿದವು. ನಿರ್ದಿಷ್ಟ ಬದಲಾವಣೆಗಳು ಗೋಚರಿಸುವ ಅಂದಾಜು ಅವಧಿಯನ್ನು ಮಾತ್ರ ನಾವು ಉಲ್ಲೇಖಿಸಬಹುದು.

ಹಾಗಾದರೆ, ಇತಿಹಾಸವನ್ನು ದಿನಾಂಕಗಳ ಕ್ರಮದೊಂದಿಗೆ ಏಕೆ ಸಂಯೋಜಿಸಬೇಕು? ಈ ಸಂಯೋಜನೆಗೆ ಒಂದು ಕಾರಣವಿದೆ. ಒಂದು ಕಾಲದಲ್ಲಿ ಇತಿಹಾಸ ಎಂದರೆ ಯುದ್ಧಗಳು, ಮಹಾನ್ ಘಟನೆಗಳ ವಿವರಣೆ ಎನ್ನುವ ಕಾಲವಿತ್ತು. ಇದು ಆಡಳಿತಗಾರರು ಮತ್ತು ಅವರ ನೀತಿಗಳ ಕುರಿತು ಇರುತ್ತಿತ್ತು. ಒಬ್ಬ ರಾಜನು ಪಟ್ಟಾಭಿಷೇಕ ಮಾಡಿದ ವರ್ಷ, ಅವನು ವಿವಾಹವಾದ ವರ್ಷ, ಅವನು ಮಗುವನ್ನು ಪಡೆದ ವರ್ಷ, ಅವನು ಯುದ್ಧ ಮಾಡಿದ ವರ್ಷ, ಅವನು ಸತ್ತ ವರ್ಷ ಮತ್ತು ರಾಜನ ವಾರಸುದಾರ ರಾಜನು ಆದ ವರ್ಷ ಮುಂತಾದ ಘಟನೆಗಳನ್ನು ಇತಿಹಾಸಕಾರರು ಬರೆದಿದ್ದಾರೆ. ಇಂತಹ ಘಟನೆಗಳಿಗೆ ನಿರ್ದಿಷ್ಟ ದಿನಾಂಕಗಳನ್ನು ನಿರ್ಧರಿಸಬಹುದು. ಇಂತಹ ಇತಿಹಾಸದಲ್ಲಿ ದಿನಾಂಕಗಳ ಬಗ್ಗೆ ಚರ್ಚೆಗಳು ಪ್ರಮುಖವಾಗಿ ಮುಂದುವರೆಯುತ್ತವೆ.




***ಚಿತ್ರ-2*** *ಜಾಹೀರಾತುಗಳು ಅಭಿರುಚಿಯನ್ನು ಹೆಚ್ಚಿಸುತ್ತವೆ.*

ಹೊಸ ಉತ್ಪನ್ನಗಳಿಗೆ ಮಾರುಕಟ್ಟೆಗಳು ಹೇಗೆ ಸೃಷ್ಟಿಸಲ್ಪಡುತ್ತವೆಯೋ ಮತ್ತು ಹೊಸ ಅಭಿರುಚಿಗಳು ಹೇಗೆ ಜನಪ್ರಿಯಗೊಳ್ಳುತ್ತವೆ ಎಂದು ಅರ್ಥಮಾಡಿಕೊಳ್ಳಲು ಹಳೇ ಜಾಹೀರಾತುಗಳು ಸಹಾಯವಾಗುತ್ತವೆ. 1922ರಲ್ಲಿ ಲಿಫ್ಟನ್ ಚಹಾದ ಈ ಜಾಹೀರಾತು ಪ್ರಪಂಚದಾದ್ಯಂತ ಚಹಾದ ಹಿರಿಮೆಯನ್ನು ತಿಳಿಯಪಡಿಸುತ್ತದೆ. ಮೇಲಿನ ಚಿತ್ರದ ಹಿನ್ನೆಲೆಯಲ್ಲಿ ಭಾರತೀಯ ಅರಮನೆಯ ಹೊರ ಗೋಡೆಯನ್ನು ನೀವು ನೋಡಬಹುದು. ಮುಂಭಾಗದಲ್ಲಿ ಕುದುರೆಯ ಮೇಲೆ ಕುಳಿತಿರುವ ಡ್ಯೂಕ್ ಆಫ್ ಕನೌಟ್ ಎಂದು ಬಿರುದು ಪಡೆದಿರುವ ಬ್ರಿಟನ್ ವಿಕ್ಟೋರಿಯಾ ಮಹಾರಾಣಿಯ ಮೂರನೇ ಮಗನನ್ನು ನೋಡಬಹುದು.

ಕಳೆದ ಎರಡು ವರ್ಷಗಳ ಇತಿಹಾಸದ ಪಠ್ಯಪುಸ್ತಕದಲ್ಲಿ ನೀವು ನೋಡಿದಂತೆ, ಇತಿಹಾಸಕಾರರು ದಿನಾಂಕಗಳೊಂದೇ ಅಲ್ಲದೇ ಅನೇಕ ಇತರ ಸಮಸ್ಯೆಗಳು ಮತ್ತು ಪ್ರಶ್ನೆಗಳ ಬಗ್ಗೆ ಬರೆಯುತ್ತಾರೆ. ಜನರು ತಮ್ಮ ಜೀವನೋಪಾಯವನ್ನು ಹೇಗೆ ಗಳಿಸಿದರು, ಅವರು ಏನನ್ನು ಉತ್ಪಾದಿಸಿದರು ಮತ್ತು ಏನು ತಿಂದರು, ನಗರಗಳು ಹೇಗೆ ಅಭಿವೃದ್ಧಿಗೊಂಡವು ಮತ್ತು ಮಾರುಕಟ್ಟೆಗಳು ಹೇಗೆ ಹುಟ್ಟಿಕೊಂಡವು, ಸಾಮ್ರಾಜ್ಯಗಳು ಹೇಗೆ ರೂಪುಗೊಂಡವು, ಹೊಸ ಆಲೋಚನೆಗಳು ಹೇಗೆ ಹರಡಿದವು, ಸಂಸ್ಕೃತಿಗಳು ಸಮಾಜಗಳು ಹೇಗೆ ಬದಲಾವಣೆ ಹೊಂದಿದವು - ಇಂತಹ ಅಂಶಗಳ ಕುರಿತು ಆಲೋಚಿಸಿದರು.

## ಯಾವ ದಿನಾಂಕಗಳು ?

ಯಾವ ಮಾನದಂಡದ ಮೂಲಕ ನಾವು ದಿನಾಂಕಗಳನ್ನು ಪ್ರಮುಖವಾದವು ಎಂದು ಆಯ್ಕೆ ಮಾಡುತ್ತೇವೆ? ನಾವು ಆಯ್ಕೆ ಮಾಡಿಕೊಂಡ ದಿನಾಂಕಗಳಿಗೆ ಹಾಗೂ ಅವುಗಳ ಸುತ್ತಲೂ ನಾವು ರಚಿಸಿದ ಇತಿಹಾಸಕ್ಕೆ ಒಂದು ವಿಶೇಷ ಪ್ರಾಮುಖ್ಯತೆ ಏನೂ ಇಲ್ಲ. ಆ ದಿನಾಂಕಗಳಲ್ಲಿ ನಡೆದ ಘಟನೆಗಳು ಮುಖ್ಯವಾದವು ಆದ್ದರಿಂದ ದಿನಾಂಕಗಳು ಮುಖ್ಯವಾದವು. ನಮ್ಮ ಅಧ್ಯಯನದ ಗಮನವು ಹೊಸ ಸಮಸ್ಯೆಗಳ ಕಡೆಗೆ ಹಾಗೂ ಬದಲಾವಣೆಗಳ ಕಡೆಗೆ ಹರಿಸಿದರೆ ಹೊಸ ದಿನಾಂಕಗಳು ಮುಖ್ಯವಾದವುಗಳಾಗಿ ಕಾಣುತ್ತವೆ.

ಒಂದು ಉದಾಹರಣೆಯನ್ನು ಪರಿಶೀಲಿಸೋಣ, ಭಾರತದೇಶದಲ್ಲಿ ಬ್ರಿಟೀಷ್ ಇತಿಹಾಸಕಾರರು ಬರೆದ ಇತಿಹಾಸದಲ್ಲಿ ಪ್ರತಿಯೊಬ್ಬ ಗವರ್ನರ್ ಜನರಲ್ ಆಡಳಿತವು ಮುಖ್ಯವಾದುದು. ಈ ಇತಿಹಾಸವು ಮೊದಲ ಗವರ್ನರ್ ಜನರಲ್ ವಾರೆನ್ ಹೇಸ್ಟಿಂಗ್ಸ್ ಆಳ್ವಿಕೆಯೊಂದಿಗೆ ಪ್ರಾರಂಭವಾಗಿ ಕೊನೆಯ ವೈಸ್‌ರಾಯ್ ಲಾರ್ಡ್ ಮೌಂಟ್ ಬ್ಯಾಟನ್ ಆಡಳಿತದೊಂದಿಗೆ ಕೊನೆಗೊಂಡಿತು.



https://amaravathiteacher.com

ಪ್ರತ್ಯೇಕ ಅಧ್ಯಾಯಗಳಲ್ಲಿ ಹೇಸ್ಟಿಂಗ್ಸ್, ವೆಲ್ಲೆಸ್ಲಿ, ಬೆಂಟಿಂಕ್, ಡಲ್ಹೌಸಿ, ಕ್ಯಾನಿಂಗ್, ಲಾರೆನ್ಸ್, ಲಿಟ್ಟನ್, ಕರ್ಜನ್, ಹಾರ್ಡಿಂಗ್, ಇರ್ವಿನ್ ಮುಂತಾದವರು ಕೈಗೊಂಡ ಕ್ರಮಗಳ ಕುರಿತು ಓದುತ್ತೇವೆ. ಈ ವಿಧವಾಗಿ ಗವರ್ನರ್ ಜನರಲ್‌ಗಳು ಮತ್ತು ವೈಸ್‌ರಾಯ್‌ಗಳ ಅಂತ್ಯವಿಲ್ಲದ ಉತ್ತರಾಧಿಕಾರವಾಗಿ ಕಂಡು ಬರುತ್ತದೆ. ಈ ಇತಿಹಾಸದ ಪುಸ್ತಕದ ದಿನಾಂಕಗಳೆಲ್ಲಾ ಈ ವ್ಯಕ್ತಿಗಳೊಂದಿಗೆ ಅವರ ಚಟುವಟಿಕೆಗಳು, ನೀತಿಗಳು, ಸಾಧನೆಗಳೊಂದಿಗೆ ಸಂಯೋಜಿಸಲ್ಪಟ್ಟಿರುತ್ತವೆ. ಇವಲ್ಲದೆ ನಮಗೆ ಇತಿಹಾಸದಲ್ಲಿ ಮುಖ್ಯವಾದವು ಏನೂ ಇಲ್ಲ ಎಂದು ಅನಿಸುತ್ತದೆ. ಅವರ ಜೀವನದ ಕ್ರಮವನ್ನು ಬ್ರಿಟೀಷ್ ಇಂಡಿಯಾ ಇತಿಹಾಸದಲ್ಲಿ ವಿವಿಧ ಅಧ್ಯಾಯಗಳಲ್ಲಿ ರಚಿಸಲಾಗಿದೆ.

ಈ ಕಾಲದ (ಅವಧಿ) ಇತಿಹಾಸವನ್ನು ಬೇರೆ ರೀತಿಯಲ್ಲಿ ಬರೆಯ ಬಹುದಲ್ಲವೇ? ಈ ಗವರ್ನರ್ ಜನರಲ್‌ಗಳ ಇತಿಹಾಸವನ್ನು ಬರೆಯುವಾಗ ಭಾರತೀಯ ಸಮಾಜದಲ್ಲಿನ ವಿವಿಧ ಸಮೂಹಗಳು ಮತ್ತು ವರ್ಗಗಳ ಚಟುವಟಿಕೆಗಳ ಮೇಲೆ ನಾವು ಹೇಗೆ ಗಮನ ಹರಿಸುತ್ತೇವೆ?

ನಾವು ಇತಿಹಾಸ ಅಥವಾ ಕಥೆಯನ್ನು ಬರೆಯುವಾಗ ಅದನ್ನು ಕೆಲವು ಅಧ್ಯಾಯಗಳಾಗಿ ವಿಂಗಡಿಸುತ್ತೇವೆ. ನಾವು ಇದನ್ನು ಏಕೆ ಮಾಡುತ್ತೇವೆ? ಇದು ಪ್ರತಿ ಅಧ್ಯಾಯಕ್ಕೆ ಸುಸಂಬದ್ಧತೆಯನ್ನು ನೀಡುವುದು ಹಾಗೂ ಘಟನೆಗಳನ್ನು ಒಂದು ಕ್ರಮದಲ್ಲಿ ಜೋಡಿಸಲು ಹೀಗೆ ಮಾಡುತ್ತೇವೆ. ಕಥೆಯನ್ನು ಅರ್ಥಪೂರ್ಣವಾಗಿ ಹೇಳಲು ಹಾಗೂ ಇತರರು ಅರ್ಥಮಾಡಿಕೊಳ್ಳಲು ಹೀಗೆ ಮಾಡುತ್ತೇವೆ. ಈ ಪ್ರಕ್ರಿಯೆಯಲ್ಲಿ ನಾವು ಹೇಳುತ್ತಿರುವ ಕಥೆಗೆ ಆಕಾರವನ್ನು ನೀಡಲು ಸಹಾಯಮಾಡುವ ಘಟನೆಗಳ ಮೇಲೆ ನಾವು ಕೇಂದ್ರೀಕರಿಸುತ್ತೇವೆ. ಬ್ರಿಟೀಷ್ ಗವರ್ನರ್ ಜನರಲ್‌ಗಳ ಜೀವನದ ಸುತ್ತಲೂ ಸುತ್ತುವ ಇತಿಹಾಸಗಳಲ್ಲಿ ಭಾರತೀಯರ ಕಾರ್ಯಕಲಾಪಗಳು ಹೊಂದಿಕೆಯಾಗುವುದಿಲ್ಲ. ಅವುಗಳಿಗೆ ತಕ್ಕ ಸ್ಥಾನವಿಲ್ಲ. ಆಗ ನಾವು ಏನು ಮಾಡುತ್ತೇವೆ? ನಮ್ಮ ಇತಿಹಾಸಕ್ಕೆ ತಕ್ಕಂತೆ ನಾವು ಬೇರೊಂದು ಯೋಜನೆ ತಯಾರಿಸಬೇಕು. ಅಂದರೆ ಹಳೆಯ ದಿನಾಂಕಗಳಿಗೆ ಹಿಂದೆ ಇದ್ದ ಮಹತ್ವ ಇನ್ನು ಮುಂದೆ ಇರುವುದಿಲ್ಲ ಎಂದು ಅರ್ಥ. ಹೊಸ ದಿನಾಂಕಗಳ ಸಮುದಾಯ ತಿಳಿದುಕೊಳ್ಳುವುದು ನಮಗೆ ಎಷ್ಟೋ ಮುಖ್ಯವಾದುದು.

### ನಾವು ಕಾಲವನ್ನು ಹೇಗೆ ವರ್ಗೀಕರಿಸುತ್ತೇವೆ?

1817 ರಲ್ಲಿ ಸ್ಕಾಟಿಷ್ ಅರ್ಥಶಾಸ್ತ್ರಜ್ಞ ಮತ್ತು ರಾಜಕೀಯ ತತ್ವಜ್ಞಾನಿಯಾದ ಜೇಮ್ಸ್‌ಮಿಲ್‌ರವರು ಬೃಹತ್ ಮೂರು ಸಂಪುಟಗಳ 'ಬ್ರಿಟೀಷ್ ಇಂಡಿಯಾ ಇತಿಹಾಸ' ಎನ್ನುವ ಪುಸ್ತಕವನ್ನು ಪ್ರಕಟಿಸಿದನು. ಈ ಪುಸ್ತಕದಲ್ಲಿ ಭಾರತದೇಶ ಇತಿಹಾಸವನ್ನು ಹಿಂದೂ, ಮುಸ್ಲಿಂ, ಬ್ರಿಟೀಷ್ ಯುಗಗಳಾಗಿ ವರ್ಗೀಕರಿಸಿದ್ದಾರೆ. ಈ ವರ್ಗೀಕರಣ ವ್ಯಾಪಕವಾಗಿ ಅನುಮೋದಿಸಲ್ಪಟ್ಟಿತು. ಈ ವಿಧವಾಗಿ ಭಾರತದೇಶದ ಇತಿಹಾಸವನ್ನು ನೋಡುವಲ್ಲಿ ಏನಾದರೂ ಸಮಸ್ಯೆಗಳಿವೆಯಾ?

ಇತಿಹಾಸವನ್ನು ಈ ವಿಧವಾಗಿ ಏಕೆ ಅವಧಿಗಳಾಗಿ ವಿಭಜಿಸಲು ಪ್ರಯತ್ನಿಸುತ್ತೇವೆ? ಆ ಕಾಲದ ಗುಣಲಕ್ಷಣಗಳನ್ನು ತಿಳಿದುಕೊಳ್ಳಲು ನಾವು ಹಾಗೆ ಮಾಡುತ್ತೇವೆ. ಅವು ಗತಕಾಲದ ಕುರಿತು ನಮ್ಮ ಕಲ್ಪನೆಗಳನ್ನು ಪ್ರತಿಬಿಂಬಿಸುತ್ತವೆ. ಹೀಗೆ ಕಾಲಗಳಾಗಿ ವರ್ಗೀಕರಿಸಲು ನಾವು ಉಪಯೋಗಿಸುವ ಪದಗಳು ಮುಖ್ಯವಾದವು. ಅಂದರೆ ಅವು ವಿವಿಧ ಕಾಲಗಳ ನಡುವಿನ ವ್ಯತ್ಯಾಸಗಳನ್ನು ಸೃಷ್ಟಿಸಲು ಉಪಯೋಗವಾಗುತ್ತವೆ. ಒಂದು ಕಾಲದಿಂದ ಮತ್ತೊಂದು ಕಾಲಕ್ಕೆ ಬದಲಾವಣೆ ಹೊಂದುವಾಗ ಮುಖ್ಯವಾಗುವ ಅಂಶಗಳನ್ನು ಇವು ತಿಳಿಯಪಡಿಸುತ್ತವೆ.

ಜೇಮ್ಸ್ ಮಿಲ್‌ಗೆ ಏಷ್ಯಾದ ಸಮಾಜಗಳ ನಾಗರೀಕತೆಗಳ ಮಟ್ಟ ಯೂರೋಪಿನವರಿಗಿಂತ ಕೆಳಮಟ್ಟದಲ್ಲಿ ಇವೆ ಎನ್ನುವ ಅಭಿಪ್ರಾಯ ಇತ್ತು. ಅವರ ಇತಿಹಾಸದ ಪ್ರಕಾರ ಬ್ರಿಟೀಷರು ಭಾರತದೇಶಕ್ಕೆ ಬರುವ ಮೊದಲು ಹಿಂದೂ ಮತ್ತು ಮುಸ್ಲಿಂ ನಿರಂಕುಶಾಧಿಕಾರಿಗಳು ಭಾರತದೇಶವನ್ನು ಆಳಿದರು. ಧಾರ್ಮಿಕ ಅಸಹಿಷ್ಣುತೆ, ಜಾತಿ ನಿಷೇಧಗಳು ಮತ್ತು ಮೂಢನಂಬಿಕೆಯ ಆಚಾರಗಳು ಸಮಾಜದಲ್ಲಿ ಪ್ರಾಬಲ್ಯ ಹೊಂದಿದ್ದವು ಎಂದು ಆತನ ಭಾವನೆ.



***ಚಿತ್ರ-3*** *ವಾರನ್ ಹೇಸ್ಟಿಂಗ್ಸ್ 1773ರಲ್ಲಿ ಭಾರತದ ಮೊದಲ ಗವರ್ನರ್ ಜನರಲ್ ಆದರು.*

ಇತಿಹಾಸದ ಪುಸ್ತಕಗಳು ಗವರ್ನರ್ ಜನರಲ್‌ಗಳ ಕಾರ್ಯಗಳನ್ನು ವಿವರಿಸಿದರೆ, ಜೀವನ ಚರಿತ್ರೆಗಳು ಅವರನ್ನು ವ್ಯಕ್ತಿಗಳಾಗಿ ವೈಭವೀಕರಿಸಿದವು ಮತ್ತು ವರ್ಣ ಚಿತ್ರಗಳು ಅವರನ್ನು ಶಕ್ತಿಯುತ ವ್ಯಕ್ತಿಗಳಾಗಿ ಬಿಂಬಿಸುತ್ತವೆ.

**ಚಟುವಟಿಕೆ**

ನಿಮ್ಮ ತಾಯಿ ಅಥವಾ ಇತರ ಕುಟುಂಬ ಸದಸ್ಯರ ಕುರಿತು ತಿಳಿದುಕೊಳ್ಳಲು ಅವರನ್ನು ಸಂದರ್ಶನ ಮಾಡಿ. ಅವರ ಜೀವನವನ್ನು ಕೆಲವು ಭಾಗಗಳಾಗಿ ಬೇರೆ ಬೇರೆ ಕಾಲ ಅವಧಿಯಲ್ಲಿ ವಿಂಗಡಿಸಿ ಮತ್ತು ಪ್ರತಿ ಅವಧಿಯಲ್ಲಿನ ಮಹತ್ವದ ಘಟನೆಗಳನ್ನು ಪಟ್ಟಿ ಮಾಡಿರಿ. ಪ್ರತಿ ಅವಧಿಯ ಆಧಾರವನ್ನು ವಿವರಿಸಿರಿ.



https://amaravathiteacher.com

ಬ್ರಿಟೀಷ್ ಆಡಳಿತವು ಭಾರತದೇಶವನ್ನು ನಾಗರಿಕಗೊಳಿಸುತ್ತದೆ ಎಂದು ಮಿಲ್ ಅಭಿಪ್ರಾಯ. ಇದನ್ನು ಮಾಡಲು ಭಾರತದೇಶದಲ್ಲಿ ಯೂರೋಪಿಯನ್ನರ ನಡೆತೆಗಳು, ವಿಧಾನಗಳು, ಕಲೆ, ಸಂಸ್ಥೆಗಳು ಮತ್ತು ಕಾನೂನುಗಳನ್ನು ಪರಿಚಯಿಸುವುದು ಅಗತ್ಯವಾಗಿತ್ತು. ಭಾರತೀಯ ಜನರು ಜ್ಞಾನವಂತರಾಗಿ ಮತ್ತು ಸುಖ ಸಂತೋಷಗಳಿಂದ ಜೀವಿಸಲು ಭಾರತದೇಶದ ಎಲ್ಲಾ ಭೂಭಾಗಗಳನ್ನು ಬ್ರಿಟೀಷರು ಜಯಿಸಬೇಕೆಂದೂ ಹಾಗೂ ಬ್ರಿಟೀಷರ ಸಹಾಯವಿಲ್ಲದೆ ಭಾರತದೇಶವು ಪ್ರಗತಿ ಸಾಧಿಸಲು ಸಾಧ್ಯವಿಲ್ಲವೆಂದು ಮಿಲ್ ಅಭಿಪ್ರಾಯಪಟ್ಟನು.

ಇವರು ಬರೆದ ಐತಿಹಾಸಿಕ ಗ್ರಂಥಗಳ ಪ್ರಕಾರ ಬ್ರಿಟೀಷ್ ಆಡಳಿತ ನಾಗರೀಕತೆ ಮತ್ತು ಪ್ರಗತಿಯ ಪ್ರತೀಕ. ಬ್ರಿಟೀಷ್ ಆಳ್ವಿಕೆಯ ಮೊದಲು ಭಾರತದೇಶದ ಆಡಳಿತ ಕಾಲವು ಒಂದು ಕತ್ತಲೆ ಯುಗ. ಇಂತಹ ಪರಿಕಲ್ಪನೆಯನ್ನು ಇಂದು ಒಪ್ಪಿಕೊಳ್ಳಬಹುದೇ?

ಯಾವುದೇ ಸಂದರ್ಭದಲ್ಲಾದರೂ ನಾವು ಇತಿಹಾಸದ ಕಾಲವನ್ನು ಹಿಂದೂಗಳದು ಮತ್ತು ಮುಸ್ಲಿಂಗಳದು ಎಂದು ಉಲ್ಲೇಖಿಸಬಹುದೇ? ಅದೇ ಸಮಯದಲ್ಲಿ ಅನೇಕ ರೀತಿಯ ಧರ್ಮಗಳು ಇರಲಿಲ್ಲವೇ? ಆ ಕಾಲದಲ್ಲಿ ಆಳಿದ ಆಡಳಿತಗಾರರ ಧರ್ಮದ ಆಧಾರವಾಗಿ ಆ ಕಾಲವನ್ನು ಏಕೆ ನಿರೂಪಿಸಬೇಕು. ಹಾಗೆ ಮಾಡುವುದು ಎಂದರೆ ಇತರರ ಜೀವನ ಮತ್ತು ಅವರ ಆಚರಣೆಗಳೊಂದಿಗೆ ಇತಿಹಾಸಕ್ಕೆ ಯಾವುದೇ ಸಂಬಂಧ ಇರುವುದಿಲ್ಲ. ಪ್ರಾಚೀನ ಭಾರತದೇಶದ ಆಡಳಿತಗಾರರು ಎಲ್ಲರೂ ಒಂದೇ ಧರ್ಮವನ್ನು ಆಚರಿಸಲಿಲ್ಲ ಎನ್ನುವ ವಿಷಯವನ್ನು ನಾವು ನೆನಪಿನಲ್ಲಿಡಬೇಕು?

ಬ್ರಿಟೀಷ್ ವರ್ಗೀಕರಣಕ್ಕೆ ಭಿನ್ನವಾಗಿ ಇತಿಹಾಸಕಾರರು ಭಾರತದ ಇತಿಹಾಸವನ್ನು 'ಪ್ರಾಚೀನ', 'ಮಧ್ಯಕಾಲೀನ', 'ಆಧುನಿಕಯುಗ' ಎಂದು ವಿಂಗಡಿಸಿದ್ದಾರೆ. ಈ ವಿಭಜನೆಯಲ್ಲಿ ಸಹ ಸಮಸ್ಯೆಗಳಿವೆ. ಪಾಶ್ಚಿಮಾತ್ಯ ದೇಶಗಳಿಂದ ಈ ವಿಭಜನೆಯ ಕಲ್ಪನೆಯನ್ನು ತೆಗೆದುಕೊಂಡರು. ವಿಜ್ಞಾನ, ತಾರ್ಕಿಕತೆ, ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಸಮಾನತೆಗಳಿಂದ ಕೂಡಿರುವುದೇ ಆಧುನಿಕ ಯುಗ ಎಂದು ಪಶ್ಚಿಮ ದೇಶಗಳ ಭಾವನೆ. ಆಧುನಿಕ ಸಮಾಜದಲ್ಲಿನ ಲಕ್ಷಣಗಳು ಇಲ್ಲದ ಸಮಾಜ ಎಂದು ತಿಳಿಯಪಡಿಸಲು ಮಧ್ಯಯುಗ ಎನ್ನುವ ಪದವನ್ನು ಉಪಯೋಗಿಸುತ್ತಾರೆ. ನಾವು ಇಂದು ಓದುತ್ತಿರುವ ಆಧುನಿಕ ಯುಗವನ್ನು ಹೀಗೆ ಚಿತ್ರೀಕರಿಸಲು ನಾವು ವಿಮರ್ಶಾರಹಿತವಾಗಿ ಸ್ವೀಕರಿಸಬಹುದೇ? ಈ ಪುಸ್ತಕದಲ್ಲಿ ನಾವು ನೋಡಿದಂತೆ ಆಳ್ವಿಕೆಯ ಕಾಲದಲ್ಲಿ ಸಮಾನತೆ ಮತ್ತು ಸ್ವಾತಂತ್ರ್ಯ ಇಲ್ಲವೆಂದು ನೀವು ಗಮನಿಸುತ್ತೀರಿ. ಆ ಕಾಲದಲ್ಲಿ ನಮ್ಮ ದೇಶದಲ್ಲಿ ಆರ್ಥಿಕ ಬೆಳವಣಿಗೆ ಮತ್ತು ಪ್ರಗತಿಯ ಕಾಲವೂ ಸಹ ಅಲ್ಲ.

ಆದ್ದರಿಂದ ಅನೇಕ ಇತಿಹಾಸಕಾರರು ಈ ಅವಧಿಯನ್ನು 'ವಸಾಹತುಶಾಹಿ' ಎಂದು ಉಲ್ಲೇಖಿಸುತ್ತಾರೆ.

### ವಸಾಹತುಶಾಹಿ ಎಂದರೇನು?

ಬ್ರಿಟೀಷರು ಸ್ಥಳೀಯ ನವಾಬರು ಮತ್ತು ರಾಜರನ್ನು ಅಧೀನಗೊಳಿಸಿಕೊಳ್ಳುವುದರ ಮೂಲಕ ಭಾರತದೇಶವನ್ನು ಜಯಿಸಿ ಅವರ ಆಳ್ವಿಕೆಯನ್ನು ಹೇಗೆ ಸ್ಥಾಪಿಸಿದರು ಎಂದು ಈ ಪುಸ್ತಕದಲ್ಲಿ ಓದುತ್ತೀರಿ. ನಮ್ಮ ಆರ್ಥಿಕ ವ್ಯವಸ್ಥೆಯ ಮೇಲೆ ಹಾಗೂ ಸಮಾಜದ ಮೇಲೆ ಅವರು ಯಾವ ವಿಧವಾಗಿ ನಿಯಂತ್ರಣ ಸ್ಥಾಪಿಸಿದರು, ಅವರ ಎಲ್ಲಾ ಖರ್ಚುಗಳನ್ನು ಪೂರೈಸಲು ಆದಾಯವನ್ನು ಹೇಗೆ ಸಂಗ್ರಹಿಸಿದರು, ಕಡಿಮೆ ಬೆಲೆಗೆ ಬಯಸಿದ ಸರಕುಗಳನ್ನು ಹೇಗೆ ಖರೀದಿಸಿದರು, ಅವರ ರಫ್ತಿಗೆ ಬೇಕಾದ ಬೆಳೆಗಳನ್ನು ಹೇಗೆ ಉತ್ಪಾದಿಸಿದರು ಎಂದು ನೀವು ಅರ್ಥಮಾಡಿಕೊಳ್ಳುವಿರಿ. ಇದರ ಪರಿಣಾಮವಾಗಿ ಉಂಟಾದ ಬದಲಾವಣೆಗಳನ್ನು ನೀವು ಅರ್ಥಮಾಡಿಕೊಳ್ಳುವಿರಿ. ಬ್ರಿಟೀಷ್ ಆಡಳಿತದ ಮೂಲಕ ಭಾರತೀಯ ಮೌಲ್ಯಗಳು ಮತ್ತು ಅಭಿರುಚಿಗಳಲ್ಲಿ, ಸಾಂಪ್ರದಾಯಗಳಲ್ಲಿ, ಆಚರಣೆಗಳಲ್ಲಿ ಅವರು ತಂದ ಬದಲಾವಣೆಗಳನ್ನು ತಿಳಿದುಕೊಳ್ಳುವಿರಿ. ಒಂದು ದೇಶ ಇನ್ನೊಂದು ದೇಶವನ್ನು ವಶಪಡಿಸಿಕೊಳ್ಳುವುದರಿಂದ ಆ ದೇಶದ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳು ಇರುತ್ತವೆ. ಇದನ್ನೇ ನಾವು ವಸಾಹತುಶಾಹಿ ಎಂದು ಕರೆಯುತ್ತೇವೆ.

ಆದಾಗ್ಯೂ, ಎಲ್ಲಾ ವರ್ಗಗಳು ಮತ್ತು ಸಮುದಾಯಗಳು ಈ ಬದಲಾವಣೆಗಳನ್ನು ಒಂದೇ ರೀತಿಯಲ್ಲಿ ಅನುಭವಿಸಲಿಲ್ಲ ಎನ್ನುವ ವಿಷಯವನ್ನು ನೀವು ತಿಳಿದುಕೊಳ್ಳುತ್ತೀರಿ. ಅದಕ್ಕಾಗಿಯೇ ಈ ಪುಸ್ತಕವನ್ನು ''ನಮ್ಮ ಭೂತಕಾಲ'' ಎಂದು ಕರೆಯಲಾಗುತ್ತದೆ.



https://amaravathiteacher.com

## ನಮಗೆ ಹೇಗೆ ಗೊತ್ತು?

ಕಳೆದ 250 ವರ್ಷಗಳ ಭಾರತೀಯ ಇತಿಹಾಸವನ್ನು ಬರೆಯುವ ಇತಿಹಾಸಕಾರರು ಯಾವ ಮೂಲಾಧಾರಗಳನ್ನು ಉಪಯೋಗಿಸಿದರು?

### ಆಡಳಿತದಿಂದ ದಾಖಲೆಗಳು ಉತ್ಪತ್ತಿ ಆಗುತ್ತವೆ

ಬ್ರಿಟೀಷರ ಆಡಳಿತಕ್ಕೆ ಸಂಬಂಧಿಸಿದ ಅಧಿಕೃತ ದಾಖಲೆಗಳು ಇತಿಹಾಸ ರಚನೆಗೆ ಮತ್ತೊಂದು ಪ್ರಮುಖ ಆಧಾರ. 'ಬರವಣಿಗೆಯನ್ನು' ಬಹಳ ಮುಖ್ಯವಾದ ಪ್ರಕ್ರಿಯೆ ಎಂದು ಬ್ರಿಟೀಷರು ನಂಬಿದ್ದರು. ಪ್ರತಿಯೊಂದು ಆದೇಶ,, ಯೋಜನೆ, ನೀತಿ ನಿರ್ಧಾರ, ಒಪ್ಪಂದ, ತನಿಖೆಯನ್ನು ಸ್ಪಷ್ಟವಾಗಿ ಬರೆಯಬೇಕಿತ್ತು. ಒಮ್ಮೆ ಇದು ನಡೆದ ನಂತರ ವಿಷಯಗಳನ್ನು ನಾವು ಸರಿಯಾಗಿ ಅಧ್ಯಯನ ಮಾಡುವುದು ಮತ್ತು ಚರ್ಚಿಸಬಹುದು. ಈ ಸಧೃಢ ಪರಿಕಲ್ಪನೆಯಿಂದ ಜ್ಞಾಪನೆಗಳು, ಆದೇಶಗಳು, ಟಿಪ್ಪಣಿಗಳು ಮತ್ತು ವರದಿಗಳು ಎನ್ನುವ ಆಡಳಿತಾತ್ಮಕ ಸಂಸ್ಕೃತಿ ಏರ್ಪಟ್ಟಿತು.

ಬ್ರಿಟೀಷರು ಎಲ್ಲಾ ಪ್ರಮುಖ ದಾಖಲೆಗಳನ್ನು ಮತ್ತು ಪತ್ರ ವ್ಯವಹಾರಗಳನ್ನು ಎಚ್ಚರಿಕೆಯಿಂದ ಸಂರಕ್ಷಿಸಬೇಕೆಂದು ಭಾವಿಸುತ್ತಿದ್ದರು. ಎಲ್ಲಾ ಆಡಳಿತ ಇಲಾಖೆಗಳಿಗೆ ಅನುಸಂಧಾನವಾಗಿ ಅವರು ದಾಖಲೆ ಕೊಠಡಿಗಳನ್ನು ಏರ್ಪಾಟು ಮಾಡಿದರು. ಗ್ರಾಮ ತಹಸೀಲ್ದಾರ್ ಕಛೇರಿ, ಜಿಲ್ಲಾಧಿಕಾರಿಗಳ ಕಛೇರಿ, ಆಯುಕ್ತರ ಕಛೇರಿ, ಪ್ರಾದೇಶಿಕ ಸಚಿವಾಲಯ, ನ್ಯಾಯಾಲಯಗಳು ಇತ್ಯಾದಿಗಳಲ್ಲಿನ ದಾಖಲೆಗಳನ್ನು ಸಂರಕ್ಷಿಸಲು ಅಭಿಲೇಖನಾಗಾರ ಮತ್ತು ವಸ್ತು ಸಂಗ್ರಹಾಲಯಗಳಂತಹ ವಿಶೇಷ ಸಂಸ್ಥೆಗಳು ಸ್ಥಾಪಿಸಲ್ಪಟ್ಟವು.

19ನೇ ಶತಮಾನದ ಆರಂಭದ ಸಮಯದಲ್ಲಿ ಆಡಳಿತದ ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ಸ್ಥಳಾಂತರಗೊಂಡ ಪತ್ರಗಳು ಮತ್ತು ಜ್ಞಾಪನೆಗಳನ್ನು ಇನ್ನೂ ಅಭಿಲೇಖನಾಗಾರಗಳಲ್ಲಿ ಓದಬಹುದು. ಜಿಲ್ಲಾ ಅಧಿಕಾರಿಗಳು ಸಿದ್ಧಪಡಿಸಿದ ಟಿಪ್ಪಣಿಗಳು ಮತ್ತು ವರದಿಗಳನ್ನು ಹಾಗೂ ಪ್ರಾದೇಶಿಕ ನಿರ್ವಾಹಕರಿಗೆ ಮೇಲಿನ ಅಧಿಕಾರಿಗಳು ಕಳುಹಿಸಿದ ಸೂಚನೆಗಳು ಮತ್ತು ನಿರ್ದೇಶನಗಳನ್ನು ಸಹ ನೀವು ಅಧ್ಯಯನ ಮಾಡಬಹುದು.

19ನೇ ಶತಮಾನದ ಆರಂಭದ ವರ್ಷಗಳಲ್ಲಿ ಈ ದಾಖಲೆಗಳನ್ನು ಎಚ್ಚರಿಕೆಯಿಂದ ನಕಲಿಸಲಾಯಿತು ಮತ್ತು ಸುಂದರವಾಗಿ ವಿಶೇಷ (ಕ್ಯಾಲಿಗ್ರಾಫಿಸ್ಟ್‌ಗಳು) ಬರಹಗಾರರಿಂದ ಬರೆಯಿಸಲಾಯಿತು. 19ನೇ ಶತಮಾನದ ಮಧ್ಯಭಾಗದಲ್ಲಿ ಮುದ್ರಣ ಬಂದಿದ್ದರಿಂದ ಸರ್ಕಾರಿ ಇಲಾಖೆಗಳು ಹಾಗೂ ದಾಖಲೆಗಳ ಬಹಳ ಪ್ರತಿಗಳನ್ನು ಮುದ್ರಿಸಲಾಯಿತು.



***ಚಿತ್ರ-4*** *1920ರಲ್ಲಿ ಏರ್ಪಾಟು ಮಾಡಿದ ರಾಷ್ಟ್ರೀಯ ಅಭಿಲೇಖನಾಗಾರ*

ಹೊಸ ದೆಹಲಿಯನ್ನು ನಿರ್ಮಿಸಿದಾಗ ರಾಷ್ಟ್ರೀಯ ವಸ್ತು ಸಂಗ್ರಹಾಲಯ ಮತ್ತು ರಾಷ್ಟ್ರೀಯ ಅಭಿಲೇಖನಾಗಾರಗಳೆರಡೂ ವೈಸ್ರಾಯ್ ಭವನಕ್ಕೆ ಹತ್ತಿರದಲ್ಲಿ ನಿರ್ಮಿಸಲ್ಪಟ್ಟವು. ಇದು ಬ್ರಿಟೀಷರ ದೃಷ್ಟಿಯಲ್ಲಿ ಈ ಕಟ್ಟಡಗಳ ಪ್ರಾಮುಖ್ಯತೆಯನ್ನು ತಿಳಿಯಪಡಿಸುತ್ತದೆ.

1ನೇ ಮೂಲಾಧಾರ

### ಗೃಹ ಇಲಾಖೆಗೆ ವರದಿಗಳು

1946ರಲ್ಲಿ ಭಾರತದಲ್ಲಿನ ವಸಾಹತುಶಾಹಿ ಸರ್ಕಾರವು ಭಾರತ ರಾಯಲ್ ಇಂಡಿಯನ್ ನೌಕಾದಳದಲ್ಲಿ ಭುಗಿಲೆದ್ದ ದಂಗೆಯನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿರುವಾಗ ವಿವಿಧ ನೌಕಾಶ್ರಯಗಳಿಂದ ಗೃಹ ಇಲಾಖೆಗೆ ಬಂದ ವರದಿಗಳ ಮಾದರಿ ಇಲ್ಲಿದೆ.

**ಬೊಂಬಾಯಿ :** ಸೇನೆಯು ಹಡಗುಗಳನ್ನು ಮತ್ತು ಇತರ ಸಂಸ್ಥೆಗಳನ್ನು ಸ್ವಾಧೀನ ಪಡಿಸಿಕೊಳ್ಳಲು ತಕ್ಕ ವ್ಯವಸ್ಥೆ ಮಾಡಲಾಗಿದೆ. ರಾಯಲ್ ನೇವಿ ಹಡಗುಗಳು ಬಂದರಿನ ಹೊರಗೆ ಇವೆ.

**ಕರಾಚಿ :** 301 ಜನ ದಂಗೆಕಾರರನ್ನು ಬಂಧಿಸಲಾಯಿತು. ಇನ್ನೂ ಕೆಲವು ಶಂಕಿತರನ್ನು ಬಂಧಿಸಲಾಗುವುದು. ಎಲ್ಲಾ ಸಂಸ್ಥೆಗಳು ಮಿಲಿಟರಿ ಕಾವಲಿನಲ್ಲಿವೆ.

**ವಿಶಾಖಪಟ್ಟಣಂ :** ಪರಿಸ್ಥಿತಿ ಸಂಪೂರ್ಣ ನಿಯಂತ್ರಣದಲ್ಲಿದೆ. ಯಾವುದೇ ಹಿಂಸಾಚಾರ ನಡೆದಿಲ್ಲ. ಹಡಗುಗಳು ಮತ್ತು ಸಂಸ್ಥೆಗಳಲ್ಲಿ ಮಿಲಿಟರಿ ಕಾವಲುಗಾರರನ್ನು ಇರಿಸಲಾಗಿದೆ. ಕೆಲವು ಜನರು ಮಾತ್ರವೇ ಕೆಲಸ ಮಾಡಲು ನಿರಾಕರಿಸುವುದನ್ನು ಹೊರತುಪಡಿಸಿ ಯಾವುದೇ ತೊಂದರೆ ಇಲ್ಲ.

ಡೈರೆಕ್ಟರ್ ಆಫ್ ಇಂಟಲಿಜೆನ್ಸ್ ಹೆಡ್ ಕ್ವಾರ್ಟರ್ಸ್ ಇಂಡಿಯಾ ಕಮಾಂಡ್
ಸಿಚ್ಯುಯೇಷನ್ ನಂ : 7
ಫೈಲ್ ನಂ : 5/21/46
ಹೋಂ ಡಿಪಾರ್ಟ್‌ಮೆಂಟ್ (ರಾಜಕೀಯ)
ಭಾರತ ಸರ್ಕಾರ



https://amaravathiteacher.com



*ಚಿತ್ರ-5 (ಎ) : ಸೀತಾಫಲ ಸಸ್ಯ 1770ರಲ್ಲಿ*

ಬೊಟಾನಿಕಲ್ ಗಾರ್ಡನ್ಸ್ ಮತ್ತು ಬ್ರಿಟೀಷರು ಸ್ಥಾಪಿಸಿದ ನೈಸರ್ಗಿಕ ಇತಿಹಾಸದ ವಸ್ತು ಸಂಗ್ರಹಾಲಯಗಳಲ್ಲಿ ವಿವಿಧ ರೀತಿಯ ಸಸ್ಯ ಮಾದರಿಗಳನ್ನು ಮತ್ತು ಅವುಗಳ ಉಪಯೋಗಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದರು. ಈ ಮಾದರಿ ಚಿತ್ರಗಳನ್ನು ಬಿಡಿಸಲು ಸ್ಥಳೀಯ ಕಲಾವಿದರನ್ನು ಕರೆದರು. ಈ ಮಾಹಿತಿಯನ್ನು ಹೇಗೆ ಸಂಗ್ರಹಿಸಿದರು ಮತ್ತು ಈ ಮಾಹಿತಿಯು ವಸಾಹತುಶಾಹಿಗಳ ಸ್ವಭಾವವನ್ನು ಹೇಗೆ ಬಹಿರಂಗ ಪಡಿಸುತ್ತದೆ ಎಂಬುದನ್ನು ಈಗ ಇತಿಹಾಸಕಾರರು ಪರಿಶೀಲಿಸುತ್ತಿದ್ದಾರೆ.


## ಸರ್ವೆಗಳು ಮುಖ್ಯವಾಗುತ್ತವೆ

ವಸಾಹತುಶಾಹಿ ಆಡಳಿತದ ಅಡಿಯಲ್ಲಿ ಸರ್ವೆಗಳು ನಿರ್ವಹಿಸುವುದು ಸಾಮಾನ್ಯವಾಯಿತು. ಒಂದು ದೇಶವನ್ನು ಪರಿಣಾಮಕಾರಿಯಾಗಿ ಆಡಳಿತ ನಿರ್ವಹಿಸಬೇಕೆಂದರೆ ಆ ದೇಶದ ಕುರಿತು ಸರಿಯಾಗಿ ತಿಳಿದುಕೊಳ್ಳ ಬೇಕೆಂಬುದೇ ಬ್ರಿಟೀಷರ ಅಭಿಪ್ರಾಯವಾಗಿತ್ತು.

ಸಂಪೂರ್ಣ ಭಾರತದೇಶದ ಕುರಿತು ತಿಳಿದುಕೊಳ್ಳಲು 19ನೇ ಶತಮಾನದ ಆರಂಭದಲ್ಲಿ ಸವಿವರವಾದ ಸರ್ವೆಯನ್ನು ಕೈಗೊಳ್ಳಲಾಯಿತು. ಗ್ರಾಮಗಳಲ್ಲಿ ರೆವೆನ್ಯೂ (ಕಂದಾಯ) ಸರ್ವೆಯನ್ನು ನಡೆಸಲಾಯಿತು. ಭೌಗೋಳಿಕ ಸ್ಥಿತಿ, ಮಣ್ಣಿನ ಗುಣಮಟ್ಟ, ಸಸ್ಯ ಸಂಕುಲ, ಪ್ರಾಣಿ ಸಂಕುಲ, ಸ್ಥಳೀಯ ಇತಿಹಾಸಗಳು ಮತ್ತು ಬೆಳೆಗಳ ಮಾದರಿ ಮುಂತಾದವು ಆ ಪ್ರದೇಶದ ಆಡಳಿತದ ಬಗ್ಗೆ ತಿಳಿದುಕೊಳ್ಳಲು ಅಗತ್ಯವಿರುವ ಎಲ್ಲಾ ವಿಷಯಗಳನ್ನು ತಿಳಿದುಕೊಳ್ಳುವ ಪ್ರಯತ್ನವಾಗಿತ್ತು. 19ನೇ ಶತಮಾನದ ಅಂತ್ಯದಿಂದ ಜನಗಣತಿಯ ಕಾರ್ಯಾಚರಣೆಗಳು ಪ್ರತಿ ಹತ್ತು ವರ್ಷಗಳಿಗೊಮ್ಮೆ ನಡೆಯುತ್ತಿದ್ದವು. ಇವುಗಳು ಭಾರತದೇಶದ ಎಲ್ಲಾ ಪ್ರಾಂತ್ಯಗಳಲ್ಲಿನ ಜನರ ಸಂಖ್ಯೆಯ ವಿವರವಾದ ದಾಖಲೆಗಳನ್ನು ಸಿದ್ಧಪಡಿಸಿದವು. ಜಾತಿಗಳು, ಧರ್ಮಗಳು ಮತ್ತು ಉದ್ಯೋಗದ ಮಾಹಿತಿಯನ್ನು ಸಂಗ್ರಹಿಸಲ್ಪಟ್ಟವು. ಸಸ್ಯ ಶಾಸ್ತ್ರೀಯ ಸರ್ವೆಗಳು, ಪ್ರಾಣಿಶಾಸ್ತ್ರದ ಸರ್ವೆಗಳು, ಪುರಾತತ್ವ ಶಾಸ್ತ್ರದ ಸರ್ವೆಗಳು, ಮಾನವ ಶಾಸ್ತ್ರೀಯ ಸರ್ವೆಗಳು, ಅರಣ್ಯ ಸರ್ವೆಗಳು ಇನ್ನೂ ಅನೇಕ ಸರ್ವೆಗಳು ನಡೆದವು.

## ಅಧಿಕೃತ ದಾಖಲೆಗಳು ಏನನ್ನು ಹೇಳುವುದಿಲ್ಲ

ಇಷ್ಟು ವಿಶಾಲವಾದ ಈ ದಾಖಲೆಗಳಿಂದ ನಾವು ಬಹಳಷ್ಟು ತಿಳಿದುಕೊಳ್ಳಬಹುದು. ಆದರೆ ಇವುಗಳು ಅಧಿಕೃತವೆಂದು ನಾವು ನೆನಪಿಟ್ಟುಕೊಳ್ಳಬೇಕು.



*ಚಿತ್ರ-6 - ಬೆಂಗಾಲ್‌ನಲ್ಲಿ ಮ್ಯಾಪಿಂಗ್, ಸರ್ವೆ ಕಾರ್ಯಕಲಾಪಗಳು (ಜೇಮ್ಸ್ ಪ್ರಿನ್ಸ್ ಪ್ ಬಿಡಿಸಿದ ಚಿತ್ರ) 1832.*

ಪ್ರಾಜೆಕ್ಟ್ ಕಾರ್ಯಕಲಾಪಗಳ ಶಾಸ್ತ್ರೀಯ ಸ್ವಭಾವವನ್ನು ಒತ್ತಿ ಹೇಳುವುದಕ್ಕೆ ಸರ್ವೇಗಳಲ್ಲಿ ಬಳಸಿದ ಉಪಕರಣಗಳನ್ನು ಪ್ರದರ್ಶಿಸುವುದು



https://amaravathiteacher.com



***ಚಿತ್ರ-7 (ಎ) : 1857 ಬಂಡಾಯಕಾರರು***

ಚಿತ್ರಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದರೆ ಅವುಗಳನ್ನು ಸೃಷ್ಟಿಸಿದವರ ದೃಷ್ಟಿಕೋನವು ತಿಳಿಯುತ್ತದೆ. 1857ರ ದಂಗೆಯ ನಂತರ ಬ್ರಿಟೀಷರು ರಚಿಸಿದ ಹಲವಾರು ಸಚಿತ್ರ ಪುಸ್ತಗಳಲ್ಲಿ ಈ ಚಿತ್ರವನ್ನು ಕಾಣಬಹುದು. ಕೆಳಭಾಗದಲ್ಲಿರುವ ಶೀರ್ಷಿಕೆಯ ಹೀಗೆ ಹೇಳುತ್ತದೆ : "ದಂಗೆಕೋರ ಸಿಪಾಯಿಗಳು ಲೂಟಿಯನ್ನು ಹಂಚಿಕೊಳ್ಳುತ್ತಿದ್ದಾರೆ". ಬ್ರಿಟೀಷ್ ಪ್ರತಿನಿಧಿಗಳ ದೃಷ್ಟಿಯಲ್ಲಿ ದಂಗೆಕಾರರು ದುರಾಸೆಯ ಕೆಟ್ಟ ಮತ್ತು ಕ್ರೂರವಾಗಿ ಕಾಣಿಸಿಕೊಳ್ಳುತ್ತಾರೆ. ನೀವು ಅಧ್ಯಾಯ 5ರಲ್ಲಿ ದಂಗೆಯ ಬಗ್ಗೆ ಓದುತ್ತೀರಿ.

ಅಧಿಕಾರಿಗಳು ಏನು ಯೋಚಿಸಿದರು, ಅವರು ಏನು ಬಯಸಿದರು, ಅವರು ಮುಂದಿನ ಸಂತತಿಗೆ ಏನು ಭದ್ರವಾಗಿಡಬೇಕೆಂದು ಕೊಂಡರು ಎನ್ನುವುದು ದಾಖಲೆಗಳ ಮೂಲಕ ತಿಳಿಯುತ್ತದೆ. ದೇಶದ ಇತರ ಜನರು ಏನು ಭಾವಿಸುತ್ತಾರೆ ಮತ್ತು ಅವರ ಕ್ರಿಯೆಗಳ ಹಿಂದೆ ಏನು ಅಡಗಿದೆ ಎಂಬುದನ್ನು ತಿಳಿದುಕೊಳ್ಳಲು ಈ ದಾಖಲೆಗಳು ಸಹಾಯವಾಗುವುದಿಲ್ಲ.

ಇವುಗಳಿಗಾಗಿ ನಾವು ಮತ್ತೊಂದು ಕಡೆ ಹುಡುಕಬೇಕು. ಅಧಿಕೃತ ದಾಖಲೆಗಳಿಗಿಂತ ಇವುಗಳನ್ನು ಪಡೆಯುವುದು ಬಹಳ ಕಷ್ಟವಾದರೂ ಹುಡುಕಲು ಪ್ರಾರಂಭಿಸಿದಾಗ ನಾವು ಅವುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಕಾಣುತ್ತೇವೆ. ಜನರ ದಿನಚರಿಗಳು, ಯಾತ್ರಿಕರು ಮತ್ತು ಪ್ರಯಾಣಿಕರ ರಚನೆಗಳು, ಪ್ರಮುಖ ವ್ಯಕ್ತಿಗಳ ಆತ್ಮ ಚರಿತ್ರೆಗಳು ಮತ್ತು ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟವಾದ ಜನಪ್ರಿಯ ಕಿರು ಪುಸ್ತಕಗಳು ದೊರೆಯುತ್ತವೆ. ಮುದ್ರಣವು ವಿಸ್ತರಿಸಿದಂತೆ, ಪತ್ರಿಕೆಗಳು ಪ್ರಕಟವಾದವು ಮತ್ತು ಸಮಸ್ಯೆಗಳು ಸಾಮಾಜಿಕವಾಗಿ ಚರ್ಚೆಯಾಗುತ್ತಿದ್ದವು. ನಾಯಕರು ಮತ್ತು ಸುಧಾರಕರು ತಮ್ಮ ಆಲೋಚನೆಗಳನ್ನು ಹರಡಲು ಬರೆದರು. ಕವಿಗಳು ಮತ್ತು ಕಾದಂಬರಿಕಾರರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಬರೆದರು.

ಆದರೂ, ಈ ಎಲ್ಲಾ ಮೂಲಗಳನ್ನು ವಿದ್ಯಾವಂತರು ತಯಾರಿಸಿದ್ದಾರೆ. ಇವುಗಳಿಂದ ನಾವು ಆದಿವಾಸಿಗಳು ಮತ್ತು ರೈತರು, ಗಣಿಗಳಲ್ಲಿ ಕೆಲಸ ಮಾಡುವವರು ಅಥವಾ ಬೀದಿಗಳಲ್ಲಿರುವ ಬಡವರು ಹೇಗೆ ಬದುಕಿದರು ಮತ್ತು ಇತಿಹಾಸವನ್ನು ಹೇಗೆ ಅನುಭವಿಸಿದರು ಎಂದು ತಿಳಿಯಲು ಸಾಧ್ಯವಾಗುವುದಿಲ್ಲ. ಅವರ ಜೀವನವನ್ನು ತಿಳಿದುಕೊಳ್ಳುವುದು ಹೆಚ್ಚು ಕಷ್ಟಕರವಾದ ಕೆಲಸ.

ನೀವು ಸ್ವಲ್ಪ ಪ್ರಯತ್ನಿಸಿದರೆ ಇದು ಕೂಡ ಮಾಡಬಹುದು. ನೀವು ಈ ಪುಸ್ತಕ ಓದಿದರೆ ಅದು ಹೇಗೆ ನಡೆದಿದೆಯೋ ತಿಳಿಯುತ್ತದೆ.

2ನೇ ಮೂಲಾಧಾರ

## "ಮಾನವ ಬಳಕೆಗೆ ಯೋಗ್ಯವಲ್ಲ'

ವಾರ್ತಾಪತ್ರಿಕೆಗಳು ದೇಶದಲ್ಲಿ ವಿವಿಧ ಪ್ರಾಂತಗಳಲ್ಲಿ ನಡೆದ ಚಳುವಳಿಗಳ ಕುರಿತು ತಿಳಿಸುತ್ತವೆ. 1946ರಲ್ಲಿ ಸರ್ಕಾರದ ವಿರುದ್ಧ ಪೋಲೀಸರು ಮುಷ್ಕರ ನಡೆಸಿದರು. ಅದರ ಕುರಿತು ವಾರ್ತೆ ಹೀಗೆ ಇದೆ.

ದೆಹಲಿಯಲ್ಲಿ ಎರಡು ಸಾವಿರಕ್ಕೂ ಹೆಚ್ಚು ಪೋಲೀಸರು ತಮ್ಮ ಕಡಿಮೆ ವೇತನ ಮತ್ತು ತಮಗೆ ಸರಬರಾಜು ಮಾಡಿದ ಕಳಪೆ ಗುಣಮಟ್ಟದ ಆಹಾರದ ವಿರುದ್ಧ ಗುರುವಾರ ಬೆಳಿಗ್ಗೆ ಪ್ರತಿಭಟನೆ ಯಾಗಿ ತಮ್ಮ ಆಹಾರವನ್ನು ತೆಗೆದುಕೊಳ್ಳಲು ನಿರಾಕರಿಸಿದರು.

ಈ ಸುದ್ದಿ ಇತರ ಠಾಣೆಗಳಿಗೂ ಹರಡುತ್ತಿದ್ದಂತೆ, ಅಲ್ಲಿಯೂ ಸಹ ಪೋಲೀಸರು ಆಹಾರವನ್ನು ತೆಗೆದುಕೊಳ್ಳಲು ನಿರಾಕರಿಸಿದರು. ಪ್ರತಿಭಟಿಸುತ್ತಿರುವ ಒಬ್ಬ ಪೋಲೀಸ್ " ಪೋಲೀಸ್ ಇಲಾಖೆಯವರು ನೀಡುತ್ತಿರುವ ಆಹಾರ ನಾವು ತಿನ್ನಲು ಯೋಗ್ಯವಾಗಿಲ್ಲ, ನಾವು ತಿನ್ನುವ ಆಹಾರವನ್ನು ಕುದುರೆಗಳು ಸಹ ತಿನ್ನುವುದಿಲ್ಲ" ಎಂದು ಹೇಳಿದರು.

ಹಿಂದೂಸ್ತಾನ್ ಟೈಮ್ಸ್
ಮಾರ್ಚಿ, *22, 1946*

### ಚಟುವಟಿಕೆ

1 ಮತ್ತು 2 ಮೂಲಾಧಾರಗಳನ್ನು ಗಮನಿಸಿ. ವರದಿ ಮಾಡುವ ಸ್ವರೂಪದಲ್ಲಿ ನೀವು ಏನಾದರೂ ವ್ಯತ್ಯಾಸವನ್ನು ಗಮನಿಸಿದ್ದೀರಾ? ನೀವು ಗಮನಿಸಿರುವುದನ್ನು ವಿವರಿಸಿ.



https://amaravathiteacher.com

**ನಾವು ಊಹಿಸೋಣ**

ನೀವೇ ಒಂದು ಇತಿಹಾಸಕಾರರಾಗಿದ್ದೀರಿ ಎಂದು ನಿಮ್ಮನ್ನು ಕಲ್ಪಿಸಿಕೊಂಡು ಸ್ವಾತಂತ್ರ್ಯದ ನಂತರ ದೂರದ ಬುಡಕಟ್ಟು ಪ್ರದೇಶದಲ್ಲಿ ಕೃಷಿ ಹೇಗೆ ಬದಲಾಯಿತು ಎಂಬುದನ್ನು ತಿಳಿಯಬೇಕೆಂದುಕೊಂಡಿದ್ದೀರಿ. ಈ ಕುರಿತು ನೀವು ಮಾಹಿತಿಯನ್ನು ಪಡೆಯುವ ವಿವಿಧ ವಿಧಾನಗಳನ್ನು ಪಟ್ಟಿಮಾಡಿ.

## ನೆನಪಿಸಿಕೊಳ್ಳೋಣ

1. ತಪ್ಪೋ, ಸರಿಯೋ ತಿಳಿಸಿರಿ.

(ಎ) ಜೇಮ್ಸ್ ಮಿಲ್ ಭಾರತೀಯ ಇತಿಹಾಸವನ್ನು ಮೂರು ಭಾಗಗಳಾಗಿ ವಿಂಗಡಿಸಿದ್ದಾರೆ - ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್

(ಬಿ) ಅಧಿಕೃತತ ದಾಖಲೆಗಳು ದೇಶದ ಜನರು ಏನು ಯೋಚಿಸುತ್ತಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯವಾಗುತ್ತದೆ.

(ಸಿ) ಪರಿಣಾಮಕಾರಿ ಆಡಳಿತಕ್ಕಾಗಿ ಸರ್ವೆಗಳು ಮುಖ್ಯವೆಂದು ಬ್ರಿಟೀಷರು ಭಾವಿಸಿದ್ದರು.

## ಚರ್ಚಿಸೋಣ

2. ಜೇಮ್ಸ್ ಮಿಲ್ ಸೂಚಿಸಿದ ಭಾರತೀಯ ಕಾಲಮಾನದ ವರ್ಗೀಕರಣದಲ್ಲಿ ಇರುವ ಸಮಸ್ಯೆಗಳು ಮತ್ತು ಪರಿಹಾರಗಳು ಏನು?
3. ಬ್ರಿಟೀಷರು ಅಧಿಕೃತ ದಾಖಲೆಗಳನ್ನು ಏಕೆ ಸಂರಕ್ಷಿಸಿದರು?
4. ಇತಿಹಾಸಕಾರರು ಹಳೆಯ ಪತ್ರಿಕೆಗಳಿಂದ ಪಡೆದ ಮಾಹಿತಿಗೂ, ಪೋಲೀಸರ ವರದಿಗಳಿಂದ ತೆಗೆದುಕೊಂಡ ಇತಿಹಾಸಕ್ಕೂ ಇರುವ ವ್ಯತ್ಯಾಸಗಳೇನು?

## ಹೀಗೆ ಮಾಡೋಣ

5. ಇಂದು ಪ್ರಪಂಚದಲ್ಲಿ ಸರ್ವೆಗಳಿಗೆ ಉದಾಹರಣೆಗಳನ್ನು ಯೋಚಿಸಬಲ್ಲಿರಾ? ಆಟಿಕೆ ಕಂಪನಿಗಳು ಯುವಕರು ಯಾವ ಆಟಗಳನ್ನು ಆಡುವುದರಿಂದ ಆನಂದಿಸುತ್ತಾರೆ ಎಂಬುದರ ಕುರಿತು ಮಾಹಿತಿಯನ್ನು ಹೇಗೆ ಪಡೆಯುತ್ತಾರೆ? ಅಥವಾ ಶಾಲೆಯಲ್ಲಿ ಮಕ್ಕಳ ಸಂಖ್ಯೆಯನ್ನು ಸರ್ಕಾರವು ಹೇಗೆ ತಿಳಿದುಕೊಳ್ಳುತ್ತದೆ ಎಂಬುದರ ಕುರಿತು ಯೋಚಿಸಿ? ಇಂತಹ ಸರ್ವೆಗಳ ಮೂಲಕ ಇತಿಹಾಸಕಾರನು ಎಂತಹ ನಿರ್ಣಯಗಳಿಗೆ ಬರಬಹುದು. ಮೇಲಿನ ಅಂಶಗಳ ಕುರಿತು ಆಲೋಚಿಸಿರಿ.



https://amaravathiteacher.com

# 2 ವ್ಯಾಪಾರ ವಸಾಹತುಗಳಿಂದ ಹಿಡಿದು ಸಾಮ್ರಾಜ್ಯ ಸ್ಥಾಪನೆವರೆಗೆ - ಕಂಪನಿ ಅಧಿಕಾರದ ಸ್ಥಾಪನೆ

U3I9G4

ಪ್ರಬಲ ಮೊಘಲ್ ಆಡಳಿತಗಾರರಲ್ಲಿ ಔರಂಗಜೇಬ್ ಕೊನೆಯವನು. ಪ್ರಸ್ತುತ ಭಾರತದೇಶವಾಗಿ ಕರೆಯಲ್ಪಡುವ ಅತಿವಿಶಾಲವಾದ ಭೂಭಾಗದ ಮೇಲೆ ನಿಯಂತ್ರಣವನ್ನು ಸಾಧಿಸಿದ್ದನು. 1707ರಲ್ಲಿ ಆತನ ಮರಣದ ನಂತರ ಅನೇಕ ಮೊಘಲ್ ಗವರ್ನರ್‌ಗಳು (ಸುಬೇದಾರರು) ಮತ್ತು ದೊಡ್ಡ ಜಮೀನುದಾರರು ತಮ್ಮ ಅಧಿಕಾರವನ್ನು ಸ್ಥಾಪಿಸಲು ಮತ್ತು ಪ್ರಾದೇಶಿಕ ರಾಜ್ಯಗಳನ್ನು ಏರ್ಪಡಿಸಲು ಪ್ರಾರಂಭಿಸಿದರು. ಹೀಗೆ ಭಾರತದೇಶದಾದ್ಯಂತ ಪ್ರಬಲ ಪ್ರಾದೇಶಿಕ ರಾಜ್ಯಗಳು ಏರ್ಪಡುವುದರಿಂದ ದೆಹಲಿಯು ಹೆಚ್ಚು ಕಾಲ ಪರಿಣಾಮಕಾರಿ ಆಡಳಿತ ಕೇಂದ್ರವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಲಿಲ್ಲ.

ಆದಾಗ್ಯೂ 18ನೇ ಶತಮಾನದ ದ್ವಿತೀಯಾರ್ಧದ ವೇಳೆಗೆ ರಾಜಕೀಯ ರಂಗದಲ್ಲಿ ಉದಯಿಸಿದ ಅತಿಶಕ್ತಿಯುತ ನೂತನ ಅಧಿಕಾರ ವ್ಯವಸ್ಥೆಯೇ ಬ್ರಿಟೀಷರು. ಬ್ರಿಟೀಷರು ಮೂಲತಃ ಸಣ್ಣ ವ್ಯಾಪಾರ ಕಂಪೆನಿಯಾಗಿ ಬಂದರೆಂದೂ, ಅವರು ಇಲ್ಲಿಯ ಪ್ರದೇಶಗಳನ್ನು ಸ್ವಾಧೀನ ಪಡಿಸಿಕೊಳ್ಳಲು ಆಸಕ್ತಿ ತೋರಲಿಲ್ಲವೆಂದು ನಿಮಗೆ ಗೊತ್ತಾ? ಹಾಗಾದರೆ ಅವರು ಒಂದು ವಿಶಾಲ ಸಾಮ್ರಾಜ್ಯದ ಒಡೆಯರು ಆಗಲು ಹೇಗೆ ಸಾಧ್ಯವಾಯಿತು? ಇದು ಹೇಗೆ ಸಂಭವಿಸಿತು ಎಂಬುದನ್ನು ಈ ಅಧ್ಯಾಯದಲ್ಲಿ ನೀವು ತಿಳಿದುಕೊಳ್ಳುತ್ತೀರಿ.




*ಚಿತ್ರ-1 :* ಬಹದ್ದೂರ್ ಷಾ ಜಾಫರ್ ಮತ್ತು ಅವನ ಮಕ್ಕಳನ್ನು ಕ್ಯಾಪ್ಟನ್ ಹಡ್ಸನ್ ಬಂಧಿಸುತ್ತಿರುವುದು.

ಔರಂಗಜೇಬನ ನಂತರ ಪ್ರಬಲ ಮೊಘಲ್ ದೊರೆ ಇಲ್ಲದೆ ಅವರು ಕೇವಲ ನಾಮಮಾತ್ರ ರಾಜರಾಗಿ ಉಳಿದರು. ವಾಸ್ತವವಾಗಿ 1857 ರಲ್ಲಿ ಬ್ರಿಟೀಷ್ ಆಳ್ವಿಕೆಯ ವಿರುದ್ಧ ಬೃಹತ್ ದಂಗೆಯು ಬುಗಿಲೆದ್ದಾಗ, ಆ ಸಮಯದಲ್ಲಿ ಮೊಘಲ್ ಚಕ್ರವರ್ತಿ ಬಹದ್ದೂರ್ ಷಾ ಜಾಫರ್ ಸಹಜ ನಾಯಕನಾಗಿ ಕಾಣಿಸಿಕೊಂಡನು. ಒಮ್ಮೆ ದಂಗೆಯನ್ನು ಬ್ರಿಟೀಷರು ಅಡಗಿಸಿದ ನಂತರ ಬಹದ್ದೂರ್ ಷಾ ಜಾಫರ್‌ನನ್ನು ರಾಜ್ಯಾಧಿಕಾರದಿಂದ ತೊಲಗಿಸಲಾಯಿತು. ಆತನ ಮಕ್ಕಳನ್ನು ಅತ್ಯಂತ ಕ್ರೂರವಾಗಿ ಕೊಲೆ ಮಾಡಿದರು.



https://amaravathiteacher.com




***ಚಿತ್ರ-2 :*** *18ನೇ ಶತಮಾನದಲ್ಲಿ ಭಾರತದೇಶಕ್ಕೆ ಹೋಗುವ ಮಾರ್ಗಗಳು*

## ಪೂರ್ವದ ಕಡೆಗೆ ಈಸ್ಟ್ ಇಂಡಿಯಾ ಕಂಪನಿಯ ಪಯಣ :

1600 ರಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಪೂರ್ವ ದೇಶಗಳೊಂದಿಗೆ ವ್ಯಾಪಾರ ಮಾಡಲು ಪೂರ್ಣ ಹಕ್ಕನ್ನು ಇಂಗ್ಲೆಂಡ್ ರಾಣಿಯಾದ ಎಲಿಜೆಬತ್-1 ರಿಂದ ತನಗೆ ನೀಡಲಾಗಿದೆ ಎಂದು ಒಂದು ಚಾರ್ಟರ್ (ಒಪ್ಪಂದ) ಅನ್ನು ಪಡೆಯಿತು. ಇದರ ಅರ್ಥ ಇಂಗ್ಲೆಂಡಿನ ಯಾವುದೇ ಇತರ ವ್ಯಾಪಾರ ಸಂಸ್ಥೆ ಕೂಡಾ ಈಸ್ಟ್ ಇಂಡಿಯಾ ಕಂಪನಿಯೊಂದಿಗೆ ಸ್ಪರ್ಧಿಸಬಾರದು ಎಂದು. ಈ ಚಾರ್ಟರ್‌ನಿಂದ ಈಸ್ಟ್ ಇಂಡಿಯಾ ಕಂಪನಿಯು ಸಾಗರಗಳಾದ್ಯಂತ ಅನುಕೂಲ ಮಾರ್ಗಗಳ ಮೂಲಕ ಪ್ರಯಾಣ ಮಾಡಬಹುದು ಹಾಗೂ ಹೊಸ ಭೂಭಾಗಗಳಿಗಾಗಿ ಅನ್ವೇಷಣೆ ಮಾಡಬಹುದು. ಅಲ್ಲಿಂದ ಕಡಿಮೆ ಬೆಲೆಗೆ ಸರಕುಗಳನ್ನು ಖರೀದಿಸಿ, ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಯೂರೋಪಿಗೆ ತೆಗೆದುಕೊಂಡು ಹೋಗಬಹುದು. ಉಳಿದ ಬ್ರಿಟೀಷ್ ವ್ಯಾಪಾರ ಸಂಸ್ಥೆಗಳು ಪೈಪೋಟಿಗೆ ಬರುತ್ತವೆ ಎನ್ನುವ ಭಯ ಕಂಪನಿಗೆ ಇಲ್ಲ. ಆ ದಿನಗಳಲ್ಲಿ ಮುಖ್ಯವಾಗಿ **ವಾಣಿಜ್ಯ** ಸಂಸ್ಥೆಗಳು ಸ್ಪರ್ಧೆ ಇಲ್ಲದಂತೆ ನೋಡಿಕೊಂಡಿದ್ದರಿಂದ ಹೆಚ್ಚು ಲಾಭಗಳನ್ನು ಗಳಿಸಿದವು. ಇದರಿಂದ ಅವರು ಅಗ್ಗದ ಬೆಲೆಗೆ ಖರೀದಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಬಹುದು.

**ವಾಣಿಜ್ಯ :** ಒಂದು ವ್ಯಾಪಾರ ಉದ್ಯಮವು ಪ್ರಾಥಮಿಕವಾಗಿ ಅಗ್ಗದ ಬೆಲೆಗೆ ಖರೀದಿಸಿ ಹೆಚ್ಚು ಬೆಲೆಗೆ ಮಾರಾಟ ಮಾಡುವುದರ ಮೂಲಕ ಲಾಭವನ್ನು ಗಳಿಸುತ್ತದೆ.

ಆದರೆ ಈ ರಾಯಲ್ ಚಾರ್ಟರ್ ಇತರ ಯೂರೋಪಿಯನ್ ದೇಶಗಳನ್ನು ಪೂರ್ವ ಮಾರುಕಟ್ಟೆಗಳಿಗೆ ಪ್ರವೇಶಿಸುವುದನ್ನು ತಡೆಯಲು ಸಾಧ್ಯವಾಗಲಿಲ್ಲ. ಮೊದಲ ಇಂಗ್ಲೀಷ್ ಹಡಗುಗಳು ಆಫ್ರಿಕಾದ ಪಶ್ಚಿಮ ಕರಾವಳಿಯಲ್ಲಿ ಸಾಗಿ, ಗುಡ್‌ಹೋಪ್ ಭೂಶಿರವನ್ನು ಸುತ್ತಿ ಮತ್ತು ಹಿಂದೂ ಮಹಾಸಾಗರವನ್ನು ದಾಟುವ ಹೊತ್ತಿಗೆ ಪೋರ್ಚುಗೀಸರು ಈಗಾಗಲೇ ಭಾರತದ ಪಶ್ಚಿಮ ಕರಾವಳಿಯಲ್ಲಿ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿ ಗೋವಾದಲ್ಲಿ ತಮ್ಮ ನೆಲೆಯನ್ನು ಹೊಂದಿದ್ದರು. ವಾಸ್ತವವಾಗಿ ಪೋರ್ಚುಗೀಸ್ ನಾವಿಕನಾದ ವಾಸ್ಕೋಡಗಾಮಾ 1498ರಲ್ಲಿ ಭಾರತದೇಶಕ್ಕೆ ಸಮುದ್ರ ಮಾರ್ಗವನ್ನು ಕಂಡುಹಿಡಿದನು. 17ನೇ ಶತಮಾನದ ಪ್ರಾರಂಭದಲ್ಲಿ ಡಚ್ಚರು ಕೂಡಾ ಹಿಂದೂ ಮಹಾಸಾಗರದಲ್ಲಿ ವ್ಯಾಪಾರದ ಸಾಧ್ಯತೆಗಳನ್ನು ಅನ್ವೇಷಿಸುತ್ತಿದ್ದರು. ಶೀಘ್ರದಲ್ಲಿಯೇ ಫ್ರೆಂಚ್ ವ್ಯಾಪಾರಿಗಳು ಸಹ ಈ ರಂಗಕ್ಕೆ ಇಳಿದರು.

ಇಲ್ಲಿ ಸಮಸ್ಯೆಯೆಂದರೆ ಎಲ್ಲಾ ಕಂಪನಿಗಳು ಒಂದೇ ರೀತಿಯ ವಸ್ತುಗಳನ್ನು ಖರೀದಿಸಲು ಆಸಕ್ತಿ ತೋರಿದವು. ಭಾರತದೇಶದಲ್ಲಿ ಉತ್ಪಾದನೆಯಾಗುವ ಉತ್ತಮ ಗುಣಮಟ್ಟದ ಹತ್ತಿ ಮತ್ತು ರೇಷ್ಮೆಗಳಿಗೆ ಯೂರೋಪಿನಲ್ಲಿ ದೊಡ್ಡ ಮಾರುಕಟ್ಟೆಯನ್ನು ಹೊಂದಿತ್ತು. ಮೆಣಸು, ಲವಂಗ, ಏಲಕ್ಕಿ ಮತ್ತು ದಾಲ್ಚಿನ ಚೆಕ್ಕೆಗೆ ಕೂಡ ಹೆಚ್ಚಿನ ಬೇಡಿಕೆ ಇತ್ತು. ಯೂರೋಪಿಯನ್ ಕಂಪನಿಗಳ ನಡುವಿನ ಈ ಸ್ಪರ್ಧೆಯು ಅನಿವಾರ್ಯವಾಗಿ ಈ ಸರಕುಗಳ ಬೆಲೆಯನ್ನು ಹೆಚ್ಚಿಸಿ ಕಂಪನಿಗಳು ಹೆಚ್ಚು ಬೆಲೆಗೆ ಖರೀದಿಸಬೇಕಾಯಿತು ಮತ್ತು ಇದರಿಂದ ಗಳಿಸಬಹುದಾದ ಲಾಭವನ್ನು ಕಡಿಮೆಮಾಡಿತು. ವ್ಯಾಪಾರ ಕಂಪನಿಗಳು ಅಭಿವೃದ್ಧಿ ಹೊಂದಬೇಕೆಂದರೆ ಪ್ರತಿಸ್ಪರ್ಧಿಗಳನ್ನು ತೊಲಗಿಸುವುದು ಒಂದೇ ಈಗ ಇರುವ ಏಕೈಕ ಮಾರ್ಗ. ಮಾರುಕಟ್ಟೆಗಳನ್ನು ಕೈವಶಮಾಡಿಕೊಳ್ಳಬೇಕೆಂಬ ತೀವ್ರ ಬಯಕೆಯು ವ್ಯಾಪಾರ ಸಂಸ್ಥೆಗಳ ನಡುವೆ ತೀವ್ರವಾದ ಯುದ್ಧಗಳಿಗೆ ಕಾರಣವಾಯಿತು. 17 ಮತ್ತು 18ನೇ ಶತಮಾನಗಳಲ್ಲಿ ಇವರು ಆಗಾಗ್ಗೆ ಪರಸ್ಪರ ಹಡಗುಗಳನ್ನು ಮುಳುಗಿಸುತ್ತಿದ್ದರು, ಮಾರ್ಗಗಳನ್ನು ನಿರ್ಬಂಧಿಸುತ್ತಿದ್ದರು, ಸರಕುಗಳಿಂದ ತುಂಬಿದ ಶತೃಗಳ ಹಡಗುಗಳನ್ನು ತಡೆಯುತ್ತಿದ್ದರು.



https://amaravathiteacher.com

ಶಸ್ತ್ರಾಸ್ತ್ರಗಳ ಸಹಾಯದಿಂದ ವ್ಯಾಪಾರ ನಡೆಸುತ್ತಾ ವ್ಯಾಪಾರ ಕೇಂದ್ರಗಳನ್ನು ಕೋಟೆಗಳ ನಿರ್ಮಾಣದ ಮೂಲಕ ರಕ್ಷಿಸಲಾಗುತ್ತಿತ್ತು.

ವಸಾಹತುಗಳನ್ನು ಬಲಪಡಿಸುವ ಮತ್ತು ಲಾಭದಾಯಕ ವ್ಯಾಪಾರವನ್ನು ನಡೆಸುವ ಈ ಪ್ರಯತ್ನವು ಸ್ಥಳೀಯ ಆಡಳಿತಗಾರರೊಂದಿಗೆ ತೀವ್ರವಾದ ಸಂಘರ್ಷಕ್ಕೆ ಕಾರಣವಾಯಿತು. ಇದರಿಂದ ಕಂಪನಿಯ ವ್ಯಾಪಾರವನ್ನು ರಾಜಕೀಯದಿಂದ ಪ್ರತ್ಯೇಕಿಸಲು ಕಷ್ಟಕರವಾಯಿತು. ಇದು ಹೇಗೆ ಸಂಭವಿಸುತು ಎಂದು ನಾವು ನೋಡೋಣ.

## ಈಸ್ಟ್ ಇಂಡಿಯಾ ಕಂಪನಿಯ ವ್ಯಾಪಾರ ಬಂಗಾಳದಲ್ಲಿ ಪ್ರಾರಂಭ

ಬ್ರಿಟೀಷರ ಮೊದಲ ಕಾರ್ಖಾನೆಯನ್ನು 1651 ರಲ್ಲಿ ಹೂಗ್ಲೀ ನದಿ ದಡದಲ್ಲಿ ಸ್ಥಾಪಿಸಲಾಯಿತು. ಆ ಸಮಯದಲ್ಲಿ ಇದು ಕ್ರಿಯಾಶೀಲವಾಗಿದ್ದು ''ಫಾಕ್ಟರ್ಸ್'' ಎಂದು ಕರೆಯಲ್ಪಡುವ ಕಂಪನೀ ವ್ಯಾಪಾರಿಗಳಿಗೆ ಕೇಂದ್ರವಾಗಿತ್ತು. ಈ ಕಾರ್ಖಾನೆಯಲ್ಲಿ ರಫ್ತು ಮಾಡುವ ಸರಕುಗಳನ್ನು ಸಂಗ್ರಹಿಸುವ ಗೋದಾಮು ಮತ್ತು ಕಂಪನಿಯ ಅಧಿಕಾರಿಗಳು ಕುಳಿತುಕೊಳ್ಳುವ ಕಛೇರಿಗಳು ಇದ್ದವು. ವ್ಯಾಪಾರ ವಿಸ್ತರಿಸಿದ ನಂತರ ವ್ಯಾಪಾರಿಗಳನ್ನು ಕಾರ್ಖಾನೆಯ ಬಳಿ ಬಂದು ನೆಲೆಸುವಂತೆ ಒಪ್ಪಿಸಿತು. 1696ರ ಹೊತ್ತಿಗೆ ಈ ವಸಾಹತು ಸುತ್ತಲೂ ಕೋಟೆಯನ್ನು ನಿರ್ಮಿಸಲು ಪ್ರಾರಂಭಿಸಿತು. ಎರಡು ವರ್ಷಗಳ ನಂತರ ಕಂಪನಿಯು ಮೊಘಲ್ ಅಧಿಕಾರಿಗಳಿಗೆ ಲಂಚನೀಡಿ ಮೂರು ಗ್ರಾಮಗಳ ಮೇಲೆ ಜಮೀನ್ದಾರೀ ಹಕ್ಕುಗಳನ್ನು ಪಡೆಯಿತು. ಇವುಗಳಲ್ಲಿ ಒಂದು ಕಾಲಿಕಟ, ನಂತರ ಕಾಲದಲ್ಲಿ ಇದು ನಂತರ ಕಲ್ಕತ್ತಾ ನಗರವಾಗಿ ಬೆಳೆದು ಈಗ ಇದನ್ನು ಕೊಲ್ಕತ್ತಾ ಎಂದು ಕರೆಯಲಾಗುತ್ತದೆ. ಕಂಪನಿಯು ಮೊಘಲ್ ಚಕ್ರವರ್ತಿ ಔರಂಗಬೇಬನನ್ನು ಸುಂಕ ಮುಕ್ತವಾಗಿ ವ್ಯಾಪಾರ ಮಾಡುವ ಹಕ್ಕನ್ನು ತಮಗೆ ನೀಡುವಂತೆ ಒಂದು **ಫರ್ಮಾನಾವನ್ನು** ಜಾರಿಗೊಳಿಸಲು ಮನವೊಲಿಸಿತು.

**ಫರ್ಮಾನ್ :** ಒಂದು ರಾಜಶಾಸನ, ರಾಜಾಜ್ಞೆ

ಕಂಪನಿಯು ಇರುವ ವಿಶೇಷ ಸದುಪಾಯಗಳನ್ನು ದುರುಪಯೋಗಗೊಳಿಸುತ್ತಾ ಹೆಚ್ಚಿನ ರಿಯಾಯಿತಿಗಳಿಗಾಗಿ ನಿರಂತರ ಪ್ರಯತ್ನಗಳನ್ನು ಮಾಡಿತು. ಉದಾಹರಣೆಗೆ ಔರಂಗಜೇಬನ ಫರ್ಮಾನು ಕಂಪನಿಗೆ ಮಾತ್ರ ತೆರಿಗೆ ಮುಕ್ತ ವ್ಯಾಪಾರದ ಹಕ್ಕನ್ನು ನೀಡಿತ್ತು. ಕಂಪನಿ ಅಧಿಕಾರಿಗಳು ಖಾಸಗಿ ವ್ಯಾಪಾರ ಮಾಡುವವರು ಸುಂಕವನ್ನು ಪಾವತಿಸಬೇಕು. ಆದರೆ ಅವರು ಸುಂಕ ಪಾವತಿಸಲು ನಿರಾಕರಿಸಿ ಬಂಗಾಳದ ಆದಾಯಕ್ಕೆ ಅಪಾರವಾದ ನಷ್ಟವನ್ನುಂಟುಮಾಡಿದರು. ಬಂಗಾಳದ ನವಾಬ ಮುರ್ಷಿದ್ ಖುಲಿಖಾನ್ ಇದನ್ನು ಪ್ರತಿಭಟಿಸದೆ ಇರಲು ಹೇಗೆ ಸಾಧ್ಯ?



*ಚಿತ್ರ-3 ಮದ್ರಾಸಿನ ಹಡಗುಗಳಿಂದ ಸ್ಥಳೀಯ ದೋಣಿಗಳು ಸರಕುಗಳನ್ನು ತರುವುದು.*
ಚಿತ್ರಕಾರ - ವಿಲಿಯಂ ಸಿಂಪ್ಸನ್ 1867



https://amaravathiteacher.com



*ಚಿತ್ರ-4 : ರಾಬರ್ಟ್ ಕ್ಲೈವ್*

**ವ್ಯಾಪಾರವು ಯುದ್ಧಗಳಿಗೆ ಹೇಗೆ ದಾರಿಮಾಡಿತು**

18ನೇ ಶತಮಾನದ ಆರಂಭದಲ್ಲಿ ಕಂಪನಿ ಮತ್ತು ಬಂಗಾಳದ ನವಾಬರ ನಡುವಿನ ಸಂಘರ್ಷವು ತೀವ್ರಗೊಂಡಿತು. ಔರಂಗಜೇಬನ ಮರಣದ ನಂತರ ಬಂಗಾಳದ ನವಾಬರು ಇತರ ಪ್ರಾದೇಶಿಕ ರಾಜರಂತೆ ಆ ಸಮಯದಲ್ಲಿ ತಮ್ಮ ಅಧಿಕಾರವನ್ನು ಹಾಗೂ ಸ್ವಾಯತ್ತತೆಯನ್ನು ಪ್ರಕಟಿಸಿಕೊಂಡರು. ಮುರ್ಷಿದ್ ಖುಲಿ ಖಾನ್ ನಂತರ ಅಲೀವರ್ಧಿ ಖಾನ್ ಅನಂತರ ಸಿರಾಜದ್ದೌಲಾ ಬಂಗಾಳದ ನವಾಬರಾದರು. ಅವರಲ್ಲಿ ಪ್ರತಿಯೊಬ್ಬರೂ ಪ್ರಬಲ ಆಡಳಿತಗಾರರಾಗಿದ್ದರು. ಇವರು ಕಂಪನಿಗೆ ರಿಯಾಯಿತಿಗಳನ್ನು ನೀಡಲು ನಿರಾಕರಿಸಿದರು. ಕಂಪನಿಗೆ ವ್ಯಾಪಾರ ಮಾಡುವ ಹಕ್ಕನ್ನು ಕಲ್ಪಿಸಿದ್ದಕ್ಕಾಗಿ ಭಾರೀ ಮೊತ್ತದಲ್ಲಿ ಕಪ್ಪ ಕಾಣಿಕೆಗಳನ್ನು ಸಲ್ಲಿಸಬೇಕೆಂದರು. ಯಾವ ವಿಧವಾದ ನಾಣ್ಯಗಳನ್ನು ಮುದ್ರಿಸಲು ಅನುಮತಿಸಲಿಲ್ಲ. ಕೋಟೆಗಳ ವಿಸ್ತರಣೆಯನ್ನು ತಡೆದರು. ಬಂಗಾಳದ ಸರ್ಕಾರಕ್ಕೆ ಬರಬೇಕಾದ ಆದಾಯವನ್ನು ದೊಡ್ಡ ಪ್ರಮಾಣದಲ್ಲಿ ದೋಚುತ್ತಿದೆಯೆಂದು ಹಾಗೂ ನವಾಬನ ಅಧಿಕಾರವನ್ನು ಧಿಕ್ಕರಿಸುತ್ತಿದೆಯೆಂದು ಕಂಪನಿಗೆ ಆರೋಪಿಸಿದರು. ಕಂಪನಿಯು ತೆರಿಗೆ ಸಲ್ಲಿಸದೇ ನವಾಬನನ್ನು ಹಾಗೂ ಆತನ ಅಧಿಕಾರಿಗಳನ್ನು ಅಗೌರವ ಪಡಿಸುತ್ತಾ ಪತ್ರಗಳನ್ನು ಬರೆಯುತ್ತಿದ್ದರು.

ಕಂಪನಿಯು ಸಹ ತನ್ನ ಪರವಾಗಿ ಅದು ಸ್ಥಳೀಯ ಅಧಿಕಾರಿಗಳ ಅನ್ಯಾಯವಾದ ಬೇಡಿಕೆಗಳಿಂದ ವ್ಯಾಪಾರದಲ್ಲಿ ನಷ್ಟವಾಗುತ್ತಿವೆಯೆಂದೂ, ತೆರಿಗೆಗಳನ್ನು ತೆಗೆದುಹಾಕುವುದರಿಂದ ಮಾತ್ರವೇ ವ್ಯಾಪಾರ ಅಭಿವೃದ್ಧಿ ಹೊಂದುತ್ತದೆ ಎಂದು ಹೇಳತೊಡಗಿತು. ವ್ಯಾಪಾರವನ್ನು ಬೆಳೆಸಿಕೊಳ್ಳಬೇಕೆಂದರೆ ಅದು ತನ್ನ ವಸಾಹತುಗಳನ್ನು ವಿಸ್ತರಿಸಬೇಕೆಂದೂ, ಗ್ರಾಮಗಳನ್ನು ಕೊಳ್ಳಬೇಕೆಂದೂ, ಮತ್ತೆ ಕೋಟೆಗಳನ್ನು ಪುನರ್ನಿರ್ಮಿಸಬೇಕೆಂದು ಹೇಳಿತು.

ಈ ವಿಭೇಧಗಳು ಘರ್ಷಣೆಗಳಿಗೆ ಕಾರಣವಾಗಿ ಹೆಸರಾಂತ ಪ್ಲಾಸೀ ಯುದ್ಧದ ಸಮಯಕ್ಕೆ ಉತ್ತುಂಗಕ್ಕೆ ಸೇರಿದವು.

**ಕೀಲುಗೊಂಬೆ** : ಅಕ್ಷರಶಹ ಆಟಿಕೆ ತಂತಿಗಳ ಮೂಲಕ ಚಲಿಸಲ್ಪಡುವ ಗೊಂಬೆ. ಈ ಪದವನ್ನು ಬೇರೆಯವರಿಂದ ನಿಯಂತ್ರಿಸಲ್ಪಡುವ ವ್ಯಕ್ತಿ ಎನ್ನುವ ಅರ್ಥದಲ್ಲಿ ಉಪಯೋಗಿಸುತ್ತಾರೆ.

**ಪ್ಲಾಸೀ ಕದನ :**

1756ರಲ್ಲಿ ಅಲೀವರ್ದಿ ಖಾನನ ಮರಣಾನಂತರ ಸಿರಾಜುದ್ದೌಲ ಬಂಗಾಳದ ನವಾಬನಾದ. ಇದರಿಂದ ಕಂಪನಿಯು ಅವನ ಅಧಿಕಾರದ ಬಗ್ಗೆ ಚಿಂತಿತಗೊಂಡಿತು. ವ್ಯಾಪಾರದ ರಿಯಾಯಿತಿಗಳು ಮತ್ತು ಇತರ ವಿಶೇಷ ಸವಲತ್ತುಗಳನ್ನು ಸ್ವ ಇಚ್ಛೆಯಿಂದ ನೀಡುವ **ಕೀಲುಗೊಂಬೆ** ಆಡಳಿತಗಾರನ ನಿರೀಕ್ಷೆಯಲ್ಲಿತ್ತು. ಆದರೆ ಅದು ಸಾಧ್ಯವಾಗಲಿಲ್ಲ. ಆದರೂ ಸಿರಾಜುದ್ದೌಲನ ಪ್ರತಿಸ್ಪರ್ಧಿಯೊಬ್ಬರಿಗೆ ನವಾಬನಾಗಲು ಸಹಾಯ ಮಾಡಲು ಪ್ರಯತ್ನಿಸಿತು. ಇದರಿಂದ ಕುಪಿತನಾದ ಸಿರಾಜದ್ದೌಲಾ ಕಂಪನಿಯು ತನ್ನ ರಾಜ್ಯದ ರಾಜಕೀಯ ವ್ಯವಹಾರಗಳಲ್ಲಿ ಮಧ್ಯ ಪ್ರವೇಶಿಸುವುದನ್ನು ನಿಲ್ಲಿಸಬೇಕೆಂದೂ, ಕೋಟೆಗಳ ನಿರ್ಮಾಣವನ್ನು ನಿಲ್ಲಿಸಬೇಕೆಂದೂ ಮತ್ತು ತೆರಿಗೆಯನ್ನು ಪಾವತಿಸಬೇಕೆಂದೂ ಕೋರಿದನು. ಚರ್ಚೆಗಳು ವಿಫಲವಾದನಂತರ, ನವಾಬನು 30,000 ಸೈನಿಕರೊಂದಿಗೆ ಕಾಸಿಮ್ ಬಜಾರ್‌ನಲ್ಲಿರುವ ಇಂಗ್ಲೀಷ್ ಕಾರ್ಖಾನೆಯ ಮೇಲೆ ದಾಳಿಮಾಡಿ ಕಂಪನಿಯ ಅಧಿಕಾರಿಗಳನ್ನು ಸೆರೆಹಿಡಿದನು. ಗೋದಾಮಿಗೆ ಬೀಗ ಹಾಕಿ ಬ್ರಿಟೀಷರನ್ನು ನಿಶ್ಯಸ್ತ್ರಗೊಳಿಸಿದನು ಹಾಗೂ ಬ್ರಿಟೀಷರ ಹಡಗುಗಳನ್ನು ದಿಗ್ಬಂಧನ ಮಾಡಿದನು. ನಂತರ ಕಲ್ಕತ್ತಾದಲ್ಲಿನ ಕಂಪನಿಯು ಕೋಟೆಯ ಮೇಲೆ ನಿಯಂತ್ರಣ ಸ್ಥಾಪಿಸಲು ಕಲ್ಕತ್ತಾಗೆ ತೆರಳಿದನು.


ಕಲ್ಕತ್ತಾ ಪತನದ ಸುದ್ದಿಯನ್ನು ಕೇಳಿದ ಮದ್ರಾಸಿನಲ್ಲಿರುವ ಕಂಪನಿ ಅಧಿಕಾರಿಗಳು ರಾಬರ್ಟ್ ಕ್ಲೈವ್‌ನ ನೇತೃತ್ವದಲ್ಲಿ ನೌಕಾಪಡೆಯಿಂದ ಕೂಡಿದ ಬಲವಾದ ಸೈನ್ಯವನ್ನು ಕಳುಹಿಸಿದರು. ನಂತರ ನವಾಬನೊಂದಿಗೆ ಸುದೀರ್ಘ ಚರ್ಚೆಗಳು ನಡೆದವು. ಅಂತಿಮವಾಗಿ 1757ರಲ್ಲಿ ರಾಬರ್ಟ್ ಕ್ಲೈವ್ ಕಂಪನಿ ಸೈನ್ಯವನ್ನು ಸಿರಾಜುದ್ದೌಲನಿಗೆ ವಿರುದ್ಧವಾಗಿ ಪ್ಲಾಸಿಕಡೆಗೆ ಮುನ್ನಡೆಸಿದನು.

### ನಿಮಗೆ ಗೊತ್ತೇ ?

ಪ್ಲಾಸೀ ಎನ್ನುವ ಹೆಸರು ಹೇಗೆ ಬಂದಿತೋ ಗೊತ್ತಾ? ಪ್ಲಾಸಿಯು ಪಲಾಶಿಯ ಆಂಗ್ಲೀಕೃತ ಉಚ್ಚಾರಣೆ ಆಗಿದೆ. ಹೋಳಿ ಹಬ್ಬದಲ್ಲಿ ಬಳಸುವ ಗುಲಾಲ್ ಪುಡಿಯನ್ನು ನೀಡುವ ಸುಂದರವಾದ ಕೆಂಪು ಹೂವುಗಳು ಬಿಡುವ ಪಲಾಸ ಮರದಿಂದ ಈ ಸ್ಥಳಕ್ಕೆ ಆ ಹೆಸರು ಬಂದಿದೆ.



https://amaravathiteacher.com



*ಚಿತ್ರ-5 : ಸಾಮಾನ್ಯ ಸಭಾ ಮಂದಿರ, ಈಸ್ಟ್ ಇಂಡಿಯಾ ಹೌಸ್, ಲೀಡೆನ್ ಹಾಲ್ ಸ್ಟ್ರೀಟ್*

ಈಸ್ಟ್ ಇಂಡಿಯಾ ಕಂಪನಿಯ ಮಾಲೀಕರ ಸಮಾವೇಶಗಳು ಈಸ್ಟ್ ಇಂಡಿಯಾ ಹೌಸ್, ಲೀಡೆನ್ ಹಾಲ್ ಸ್ಟ್ರೀಟ್, ಲಂಡನ್‌ನಲ್ಲಿ ನಡೆಯುತ್ತಿದ್ದವು. ಇದು ಅವರ ಸಮಾವೇಶಗಳು ನಡೆಯುತ್ತಿದ್ದ ಚಿತ್ರಗಳಲ್ಲಿ ಒಂದು



*ಚಿತ್ರ-6 : ಸಿರಾಜುದ್ದೌಲಾ*

ಸಿರಾಜುದ್ದೌಲನ ಸೈನ್ಯಾಧಿಪತಿಯಾದ ಮೀರ್ ಜಾಫರನು ಯುದ್ದದಲ್ಲಿ ಪಾಲ್ಗೊಳ್ಳದಿರುವುದು ನವಾಬನ ಸೋಲಿಗೆ ಮುಖ್ಯ ಕಾರಣಗಳಲ್ಲಿ ಒಂದು. ಕ್ಲೈವನು ಸಿರಾಜುದ್ದೌಲನನ್ನು ಸೋಲಿಸಿದ ನಂತರ ಮೀರ್ ಜಾಫರನನ್ನು ನವಾಬನನ್ನಾಗಿ ಮಾಡುವುದಾಗಿ ಭರವಸೆ ನೀಡಿ ಅವನನ್ನು ವಶಪಡಿಸಿಕೊಂಡನು.

ಈಸ್ಟ್ ಇಂಡಿಯಾ ಕಂಪನಿಯು ಭಾರತದೇಶದಲ್ಲಿ ಸಾಧಿಸಿದ ಮೊದಲ ಪ್ರಮುಖ ವಿಜಯವಾಗಿ ಪ್ಲಾಸೀ ಯುದ್ಧ ಪ್ರಸಿದ್ದವಾಯಿತು.

1ನೇ ಮೂಲಾಧಾರ

## ಸಂಪತ್ತಿನ ಭರವಸೆ

ವಾಣಿಜ್ಯ ಈಸ್ಟ್ ಇಂಡಿಯಾ ಕಂಪನಿಯು ಪ್ರಾದೇಶಿಕ ಮಹತ್ವಾಕಾಂಕ್ಷೆಗಳನ್ನು ಇಂಗ್ಲೆಂಡಿನಲ್ಲಿ ಅಪನಂಬಿಕೆ ಮತ್ತು ಸಂದೇಹದಿಂದ ನೋಡಲಾಯಿತು. ಪ್ಲಾಸೀ ಯುದ್ದದ ನಂತರ ರಾಬರ್ಟ್ ಕ್ಲೈವ್ 1759 ಜನವರಿ 7 ರಂದು ಕಲ್ಕತ್ತಾದಿಂದ ಇಂಗ್ಲೀಷ್ ರಾಜನ ಪ್ರಧಾನ ಕಾರ್ಯದರ್ಶಿಗಳಲ್ಲಿ ಒಬ್ಬನಾದ ವಿಲಿಯಂ ಪಿಟ್‌ಗೆ ಪತ್ರ ಬರೆದರು.

> ಆಳವಾಗಿ ಆಲೋಚಿಸಿದರೆ ಒಂದು ವಾಣಿಜ್ಯ ಕಂಪನಿಗೆ ಒಂದು ವಿಶಾಲವಾದ ದೇಶದ ಮೇಲೆ ಸಾರ್ವಭೌಮಾಧಿಕಾರ ಸಾಧಿಸುವುದು ಬಹುಶಃ ಕಷ್ಟಸಾಧ್ಯವಾದ ಕೆಲಸವೇ ಆಗಬಹುದು . . . ನಾನೇ ಸ್ವತಃ ದೃಢವಾಗಿ ಹೇಳುತ್ತಿದ್ದೇನೆ . . . ಸಂಪತ್ತಿನಿಂದ ತುಂಬಿ ತುಳುಕುತ್ತಿರುವ ಈ ರಾಜ್ಯಗಳನ್ನು ಸಂಪೂರ್ಣವಾಗಿ ಕೈವಶಪಡಿಸಿಕೊಳ್ಳುವುದು ಸ್ವಲ್ಪ ಕಷ್ಟಕರವಾದ ಕೆಲಸವೇ ಆಗಬಹುದು. ಇಲ್ಲವೇ ಯಾವುದೇ ಕಷ್ಟ ಆಗದಿರಬಹುದು... ಮೂರು ಪ್ರಾಂತ್ಯಗಳ ಸ್ವಾಧೀನದೊಂದಿಗೆ ವರ್ಷಕ್ಕೆ ಎರಡು ಮಿಲಿಯನ್ ಸ್ಟರ್ಲಿಂಗ್‌ಗಳ ಆದಾಯ ಪಡೆಯಬೇಕೇ ಎನ್ನುವ ವಿಷಯವನ್ನು ನಿಮ್ಮ ನಿರ್ಣಯಕ್ಕೆ ಬಿಡುತ್ತಿದ್ದೇನೆ . . . ಜನರ ದೃಷ್ಟಿಯನ್ನು ಆಕರ್ಷಿಸುವ ಒಂದು ವಸ್ತುವಾಗಿ ಇರಿ . . .



https://amaravathiteacher.com

## ನವಾಬನ ದೂರು

1733 ರಲ್ಲಿ ಬಂಗಾಳದ ನವಾಬ ಇಂಗ್ಲೀಷ್ ವ್ಯಾಪಾರಿಗಳ ಬಗ್ಗೆ ಹೀಗೆ ಹೇಳಿದ.

ಅವರು ಮೊದಲು ಭಾರತದೇಶಕ್ಕೆ ಬಂದಾಗ ಅಂದಿನ ಸರ್ಕಾರವನ್ನು ಬಹಳ ವಿನಮ್ರ ರೀತಿಯಲ್ಲಿ ಮನವಿ ಮಾಡಿದರು. ಏಕೆಂದರೆ ಕಾರ್ಖಾನೆ ಸ್ಥಾಪಿಸಲು ಚಿಕ್ಕ ಸ್ಥಳವನ್ನು ಕೊಂಡು ಕೊಳ್ಳಲು ಅನುಮತಿ ಕೇಳುವುದಕ್ಕಾಗಿ. ಅದು ಅಷ್ಟು ಬೇಗನೇ ಮುಂಜೂರಾಗಲಿಲ್ಲ. ಆದರೆ ಅವರು ಬಲವಾದ ಕೋಟೆಯನ್ನು ನಿರ್ಮಿಸಿ ಮತ್ತು ಅದರ ಸುತ್ತಲೂ ನೀರು ಹರಿಯುವ ಕಂದಕವನ್ನು ನಿರ್ಮಿಸಿ ಅದನ್ನು ನದಿಗೆ ಅನುಸಂಧಾನ ಮಾಡಿದರು. ಹಾಗೆಯೇ ಕೋಟೆ ಗೋಡೆಗಳ ಮೇಲೆ ಹೆಚ್ಚಿನ ಸಂಖ್ಯೆಯ ಬಂದೂಕುಗಳನ್ನು ಗುರಿ ಇಡುವಂತೆ ಅಳವಡಿಸಿದರು. ಬಹಳ ಜನ ವ್ಯಾಪಾರಿಗಳನ್ನು ತಮ್ಮ ಹತ್ತಿರ ಬಂದು ರಕ್ಷಣೆ ಪಡೆಯುವಂತೆ ಆಕರ್ಷಿಸಿದರು. ಅವರು 100, 000 ರೂಪಾಯಿಗಳ ಮೊತ್ತದ ಆದಾಯವನ್ನು ಸಂಗ್ರಹಿಸಿದರು... ಅವರು ದೋಚಿದರು ಮತ್ತು ಲೂಟಿ ಮಾಡಿದರು. ರಾಜನ ಹೆಚ್ಚಿನ ಸಂಖ್ಯೆಯ ಪ್ರಜೆಗಳನ್ನು ಲಿಂಗ ಬೇಧದ ಸಂಬಂಧವಿಲ್ಲದೆ ಸ್ತ್ರೀ ಪುರುಷರನ್ನು ಗುಲಾಮರನ್ನಾಗಿಸಿ ತಮ್ಮ ಸ್ವಂತ ದೇಶಕ್ಕೆ ಕಳುಹಿಸಿದರು.

ಪ್ಲಾಸೀ ಯುದ್ಧದ ಸೋಲಿನ ನಂತರ, ಸಿರಾಜುದ್ದೌಲನನ್ನು ಕೊಲ್ಲಲಾಯಿತು ಮತ್ತು ಮೀರ್ ಜಾಫರ್ ನವಾಬನಾದನು. ಆದರೂ ಸಹ ಆಡಳಿತದ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಕಂಪನಿಗೆ ಇಷ್ಟವಿರಲಿಲ್ಲ. ಅದರ ಮುಖ್ಯ ಉದ್ದೇಶವು ವ್ಯಾಪಾರ ವಿಸ್ತರಣೆ ಮಾತ್ರವೇ. ಕಂಪನಿಗೆ ವಿಶೇಷ ಸವಲತ್ತುಗಳನ್ನು ನೀಡಲು ಸ್ಥಳೀಯ ಆಡಳಿತಗಾರರು ಅನುಮತಿಸಿದರೆ ಭೂಭಾಗಳನ್ನು ಆಕ್ರಮಿಸಬೇಕಾದ ಅವಶ್ಯಕತೆ ಇರುವುದಿಲ್ಲ.

ಇದು ಕಷ್ಟಸಾಧ್ಯವೆಂದು ಶೀಘ್ರದಲ್ಲಿಯೇ ಕಂಪನಿ ತಿಳಿದುಕೊಂಡಿತು. ಏಕೆಂದರೆ ಈ ಕೈಗೊಂಬೆ ನವಾಬರು ಸಹ ಕಂಪನಿಯು ಬಯಸಿದಂತೆ ಯಾವಾಗಲೂ ಸಹಾಯಕಾರಿಗಳಾಗಿ ಇರುತ್ತಿರಲಿಲ್ಲ. ಎಲ್ಲವುದಕ್ಕೂ ಮಿಗಿಲಾಗಿ ಅವರು ಪ್ರಜೆಗಳಿಂದ ಗೌರವ ಪಡೆಯಬೇಕೆಂದರೆ ಅವರ ಘನತೆ ಮತ್ತು ಸಾರ್ವಭೌಮತ್ವಗಳನ್ನು ಕಾಪಾಡಿಕೊಳ್ಳಬೇಕಾಗಿತ್ತು.

ಕಂಪನಿಯು ಏನು ಮಾಡಬಲ್ಲದು? ಮೀರ್ ಜಾಫರ್ ಪ್ರತಿಭಟಿಸಿದಾಗ ಕಂಪನಿಯು ಅವನನ್ನು ಪದಚ್ಯುತಗೊಳಿಸಿ ಅವನ ಸ್ಥಾನದಲ್ಲಿ ಮೀರ್ ಖಾಸಿಂನನ್ನು ನವಾಬನನ್ನಾಗಿ ಮಾಡಿತು. ಮೀರ್ ಖಾಸಿಂ ದೂರಿದಾಗ ಕಂಪನಿಯು ಬಕ್ಸಾರ್ ಹತ್ತಿರ (1764) ನಡೆದ ಯುದ್ಧದಲ್ಲಿ ಆತನನ್ನು ಸೋಲಿಸಿ ಬಂಗಾಳದಿಂದ ಹೊರಹಾಕಿ ಮತ್ತು ಮೀರ್ ಜಾಫರ್‌ನನ್ನು ನವಾಬನಾಗಿ ಮರು ಸ್ಥಾಪಿಸಲಾಯಿತು. ನವಾಬ ಪ್ರತಿ ತಿಂಗಳು 500,000 ರೂಪಾಯಿಗಳನ್ನು ಪಾವತಿಸಬೇಕಾಗಿತ್ತು. ಆದರೆ ಕಂಪನಿಯು ತನ್ನ ಯುದ್ಧಗಳಿಗೆ ಹಣಕಾಸು ಒದಗಿಸಲು ಮತ್ತು ವ್ಯಾಪಾರ ಬೇಡಿಕೆಗಳನ್ನು ಹಾಗೂ ಇತರ ಖರ್ಚುಗಳನ್ನು ಪೂರೈಸಲು ಹೆಚ್ಚಿನ ಹಣವನ್ನು ನೀಡುವಂತೆ ಕೋರಿತು. 1765ರಲ್ಲಿ ಮೀರ್ ಜಾಫರ್‌ನ ಮರಣದ ಹೊತ್ತಿಗೆ ಕಂಪನಿಯ ಮನಸ್ಥಿತಿ ಬದಲಾಗಿತ್ತು. ಈ ಕೀಲುಗೊಂಬೆ ನವಾಬರೊಂದಿಗೆ ಕೆಲಸ ಮಾಡುವುದಕ್ಕಿಂತ "ನಮಗೆ ನಾವೇ ನವಾಬರು ಆಗಬೇಕು" ಎಂದು ಕ್ಲೈವ್ ಘೋಷಿಸಿದನು.

ಅಂತಿಮವಾಗಿ 1765ರಲ್ಲಿ ಮೊಘಲ್ ಚಕ್ರವರ್ತಿ ಕಂಪನಿಯನ್ನು ಬಂಗಾಳದ ಪ್ರಾಂತ್ಯಗಳ ದಿವಾನ್ ಆಗಿ ನೇಮಿಸಿದನು. ಕಂಪನಿಗೆ ಬಂಗಾಳದ ಅಪಾರ ಆದಾಯ ಸಂಪನ್ಮೂಲಗಳನ್ನು ಬಳಸಲು ಈ ದಿವಾನಿಯು ಅವಕಾಶ ಮಾಡಿಕೊಟ್ಟಿತು. ಇದು ಕಂಪನಿಯು ಈ ಹಿಂದೆ ಎದುರಿಸಿದ್ದ ಪ್ರಮುಖ ಸಮಸ್ಯೆಯನ್ನು ಪರಿಹರಿಸಿತು. ಹದಿನೆಂಟನೇ ಶತಮಾನದ ಆರಂಭದಿಂದ ಭಾರತದೇಶದೊಂದಿಗೆ ಅದರ ವ್ಯಾಪಾರ ವಿಸ್ತರಿಸಿತು. ಆದರೆ ಅದು ಬ್ರಿಟನ್‌ದಿಂದ ಆಮದು ಮಾಡಿಕೊಂಡ ಚಿನ್ನ ಮತ್ತು ಬೆಳ್ಳಿಯಿಂದ ಭಾರತದಲ್ಲಿ ಹೆಚ್ಚು ವಸ್ತುಗಳನ್ನು ಖರೀದಿಸಬೇಕಾಗುತ್ತಿತ್ತು. ಏಕೆಂದರೆ ಈ ಸಮಯದಲ್ಲಿ ಭಾರತದಲ್ಲಿ ಮಾರಾಟ ಮಾಡಲು ಬ್ರಿಟನ್ ಹತ್ತಿರ ಯಾವುದೇ ಸರಕು ಇರಲಿಲ್ಲ. ಪ್ಲಾಸೀ ಕದನದ ನಂತರ ಬ್ರಿಟನ್‌ನಿಂದ ಚಿನ್ನದ ಹೊರಹರಿವು ನಿಧಾನವಾಯಿತು ಮತ್ತು ದಿವಾನಿ ಲಭಿಸಿದ ನಂತರ ಸಂಪೂರ್ಣವಾಗಿ ನಿಂತುಹೋಯಿತು. ಈಗ ಭಾರತದೇಶದಿಂದ ಬರುವ ಆದಾಯವು ಕಂಪನಿಯ ವೆಚ್ಚಗಳಿಗೆ ಹಣಕಾಸು ಒದಗಿಸುತ್ತಿತ್ತು. ಈ ಆದಾಯವನ್ನು ಭಾರತದಲ್ಲಿ ಹತ್ತಿ ಮತ್ತು ರೇಷ್ಮೆ ಬಟ್ಟೆಗಳನ್ನು ಖರೀದಿಸಲು, ಕಂಪನಿಯ ಸೈನ್ಯವನ್ನು ನಿರ್ವಹಿಸಲು ಮತ್ತು ಕಲ್ಕತ್ತಾದಲ್ಲಿ ಕಂಪನಿಯ ಕೋಟೆ ಹಾಗೂ ಕಛೇರಿಗಳನ್ನು ನಿರ್ಮಿಸುವ ವೆಚ್ಚವನ್ನು ಪೂರೈಸಲು ಉಪಯೋಗಿಸುತ್ತಿದ್ದರು.

### ಕಂಪನಿ ಅಧಿಕಾರಿಗಳು 'ನಬಾಬ್ಸ್' ಆಗುವುದು :

ನವಾಬರಾಗುವುದು ಎಂದರೆ ಏನು? ಕಂಪನಿಯು ಹೆಚ್ಚಿನ ಅಧಿಕಾರ ಪಡೆಯುವುದು ಮತ್ತು ಹೆಚ್ಚು ಶಕ್ತಿವಂತರಾಗುವುದು ಎಂದು ಇದರ ಅರ್ಥ. ಆದರೆ ಇದರಲ್ಲಿ ಮತ್ತೊಂದು ಅರ್ಥ ಕೂಡಾ ಇದೆ. ಪ್ರತಿಯೊಬ್ಬ ಕಂಪನಿಯ ಸೇವಕನು ನವಾಬನಂತೆ ಬದುಕುವ ದೃಷ್ಟಿ ಕೋನವನ್ನು ಹೊಂದುವುದು.



https://amaravathiteacher.com

ಪ್ಲಾಸೀ ಕದನದ ನಂತರ ಕಂಪನಿಯ ಅಧಿಕಾರಿಗಳಿಗೆ ವೈಯಕ್ತಿಕ ಉಡುಗೊರೆಯಾಗಿ ಭೂಮಿ ಮತ್ತು ಅಪಾರ ಹಣವನ್ನು ನೀಡುವಂತೆ ಬಂಗಾಳದ ನವಾಬರನ್ನು ಒತ್ತಾಯಿಸಿದರು. ರಾಬರ್ಟ್ ಕ್ಲೈವ್ ಸ್ವತಃ ಭಾರತದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಸಂಪತ್ತನ್ನು ಸಂಗ್ರಹಿಸಿದನು. 1743ರಲ್ಲಿ ಇಂಗ್ಲೆಂಡ್‌ನಿಂದ ಮದ್ರಾಸಿಗೆ (ಈಗ ಚೆನ್ನೈ) ಬಂದಾಗ ಆತನ ವಯಸ್ಸು 18 ವರ್ಷಗಳು. 1767ರಲ್ಲಿ ಭಾರತದೇಶವನ್ನು ಬಿಟ್ಟು ಹೋಗುವಾಗ ಆತನ ಸಂಪತ್ತು £401,102 ಪೌಂಡುಗಳು ಆಗಿತ್ತು. ಕುತೂಹಲಕಾರಿಯಾಗಿ ಆತನು 1764ರಲ್ಲಿ ಬಂಗಾಳದ ಗವರ್ನರ್ ಆಗಿ ನೇಮಕಗೊಂಡಾಗ ಕಂಪನಿ ಆಡಳಿತದಲ್ಲಿ ಭ್ರಷ್ಟಾಚಾರವನ್ನು ತೊಡೆದು ಹಾಕಲು ಆತನನ್ನು ಕೇಳಲಾಯಿತು. ಆದರೆ 1772ರಲ್ಲಿ ಬ್ರಿಟೀಷ್ ಸಂಸತ್ತು ಆತನ ಅಪಾರ ಸಂಪತ್ತಿನ ಬಗ್ಗೆ ಅನುಮಾನ ವ್ಯಕ್ತಪಡಿಸಿ ವಿಚಾರಣೆ ನಡೆಸಿತು. ಆತನು ನಿರ್ದೋಷಿ ಎಂದು ಗೊತ್ತಾದರೂ, 1774ರಲ್ಲಿ ಆತ್ಮಹತ್ಯೆ ಮಾಡಿಕೊಂಡನು.

ಆದಾಗ್ಯೂ ಕಂಪನಿಯ ಎಲ್ಲಾ ಅಧಿಕಾರಿಗಳು ಕ್ಲೈವ್‌ನಂತೆ ಹಣವನ್ನು ಗಳಿಸುವಲ್ಲಿ ಯಶಸ್ವಿಯಾಗಲಿಲ್ಲ. ಇವರಲ್ಲಿ ಅನೇಕರು ರೋಗಗಳಿಂದ ಮತ್ತು ಯುದ್ಧದಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ಮರಣ ಹೊಂದಿದರು. ಇವರೆಲ್ಲರನ್ನೂ ಭ್ರಷ್ಟರು ಮತ್ತು ಅಪ್ರಾಮಾಣೀಕರು ಎಂದು ಪರಿಗಣಿಸುವುದು ಸರಿಯಲ್ಲ. ಇವರಲ್ಲಿ ಅನೇಕರು ಬಹಳ ಗೌರವಾನ್ವಿತ ಹಿನ್ನೆಲೆಯಿಂದ ಬಂದವರು. ಭಾರತದೇಶದಲ್ಲಿ ಸಾಕಷ್ಟು ಸಂಪಾದಿಸಿಕೊಂಡು ಬ್ರಿಟನ್‌ಗೆ ಹಿಂತಿರುಗಿ ಐಷಾರಾಮಿ ಜೀವನವನ್ನು ನಡೆಸಬೇಕೆಂಬುದು ಇವರೆಲ್ಲರ ಬಯಕೆ. ಯಾರು ಇಲ್ಲಿಂದ ಸಂಪತ್ತಿನಿಂದ ಹಿಂತಿರುಗಿದರೋ ಅವರು ಐಷಾರಾಮ ಜೀವನ ಸಾಗಿಸುತ್ತಾ ಅವರ ದರ್ಪವನ್ನು ಮೆರೆಯುತ್ತಿದ್ದರು. ಅವರನ್ನು 'ನಬಾಬ್ಸ್' ಎಂದು ಕರೆಯುತ್ತಿದ್ದರು. ಇದು ಭಾರತೀಯ ಪದ ನವಾಬನ ಆಂಗ್ಲೀಕೃತ ಆವೃತ್ತಿಯಾಗಿತ್ತು. ಇವರನ್ನು ಹೆಚ್ಚಾಗಿ ಬ್ರಿಟೀಷ್ ಸಮಾಜದಲ್ಲಿ ನವ ಶ್ರೀಮಂತರು ಹಾಗೂ ಸಾಮಾಜಿಕ ಅತ್ಯುನ್ನತ ವರ್ಗವಾಗಿ ಪರಿಗಣಿಸಲಾಗುತ್ತಿತ್ತು. ವ್ಯಂಗ್ಯ ಚಿತ್ರಗಳು ಮತ್ತು ನಾಟಕಗಳಲ್ಲಿ ಇವರನ್ನು ಅಪಹಾಸ್ಯ ಮಾಡುತ್ತಾ ಹಾಸ್ಯಕ್ಕಾಗಿ ಗೇಲಿ ಮಾಡಲಾಗುತ್ತಿತ್ತು.

### ಕಂಪನಿಯ ಅಧಿಕಾರ ವಿಸ್ತರಣೆ:

1757 ರಿಂದ 1857 ವರೆಗೆ ಈಸ್ಟ್ ಇಂಡಿಯಾ ಕಂಪನಿಯಿಂದ ಭಾರತೀಯ ರಾಜ್ಯಗಳನ್ನು ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ವಿಶ್ಲೇಷಿಸಿದರೆ, ಕೆಲವು ಪ್ರಮುಖ ಅಂಶಗಳು ಗೋಚರವಾಗುತ್ತವೆ. ಕಂಪನಿಯು ಅಪರಿಚಿತ ಪ್ರದೇಶಗಳ ಮೇಲೆ ನೇರ ಮಿಲಿಟರಿ ದಾಳಿಯನ್ನು ವಿರಳವಾಗಿ ಮಾಡುತ್ತಿತ್ತು. ಬದಲಾಗಿ ಅದು ಭಾರತೀಯ ಸಾಮ್ರಾಜ್ಯವನ್ನು ಸ್ವಾಧೀನ ಪಡಿಸಿಕೊಳ್ಳುವ ಮೊದಲು ತನ್ನ ಪ್ರಭಾವವನ್ನು ತೋರಲು ವಿವಿಧ ರಾಜಕೀಯ, ಆರ್ಥಿಕ ಮತ್ತು ರಾಜತಾಂತ್ರಿಕ ವಿಧಾನಗಳನ್ನು ಬಳಸುತ್ತಿತ್ತು.

1764 ನಲ್ಲಿ ಬಕ್ಸಾರ್ ಯುದ್ಧದ ನಂತರ, ಕಂಪನಿಯು ಭಾರತೀಯ ರಾಜ್ಯಗಳಲ್ಲಿ ರಾಜ ಪ್ರತಿನಿಧಿಗಳನ್ನು ನೇಮಿಸಿತು. ಅವರು ರಾಜಕೀಯ ಅಥವಾ ವಾಣಿಜ್ಯ ಗುತ್ತಿಗೆದಾರರಾಗಿ (ಏಜೆಂಟ್) ಕೆಲಸ ಮಾಡುತ್ತಿದ್ದರು. ಕಂಪನಿಗೆ ಸೇವೆ ಸಲ್ಲಿಸುವುದು ಮತ್ತು ಕಂಪನಿಯ ಹಿತಾಸಕ್ತಿಗಳನ್ನು ಮತ್ತಷ್ಟು ಹೆಚ್ಚಿಸುವುದು ಅವರ ಕರ್ತವ್ಯವಾಗಿತು. ಈ ರೆಸಿಡೆಂಟ್‌ಗಳ ಮೂಲಕ ಕಂಪನಿ ಅಧಿಕಾರಿಗಳು ಭಾರತೀಯ ರಾಜ್ಯಗಳ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡಲು ಪ್ರಾರಂಭಿಸಿದರು. ಸಿಂಹಾಸನದ ಉತ್ತರಾಧಿಕಾರಿ ಯಾರು ಮತ್ತು ಆಡಳಿತಾತ್ಮಕ ಹುದ್ದೆಗಳಲ್ಲಿ ಯಾರನ್ನು ನೇಮಿಸಬೇಕು ಎಂದು ಅವರು ನಿರ್ಧರಿಸಲು ಪ್ರಯತ್ನಿಸುತ್ತಿದ್ದರು. ಕೆಲವೊಮ್ಮೆ ಕಂಪನಿಯು ರಾಜ್ಯಗಳನ್ನು ಸಹಾಯಕ ಸೈನ್ಯ ಪದ್ಧತಿಯನ್ನು ಅಂಗೀಕರಿಸುವಂತೆ ಒತ್ತಾಯ ತರುತ್ತಿತ್ತು. ಈ ಒಪ್ಪಂದದ ಪ್ರಕಾರ ಭಾರತೀಯ ಆಡಳಿತಗಾರರು ತಮ್ಮ ಸ್ವತಂತ್ರ ಸಶಸ್ತ್ರ ಪಡೆಗಳನ್ನು ಹೊಂದಲು ಅನುಮತಿಸಲಿಲ್ಲ. ಅವರ ರಕ್ಷಣೆಯ ಹೊಣೆಗಾರಿಕೆಯನ್ನು ಕಂಪನಿಯು ನೋಡಿಕೊಳ್ಳುತ್ತದೆ, ಆದರೆ

3ನೇ ಮೂಲಾಧಾರ

**ಕ್ಲೈವ್ ತನ್ನನ್ನು ಹೇಗೆ ವರ್ಣಿಸಿಕೊಂಡನು**

ಸಂಸತ್ತಿನ ಸಮಿತಿಯ ಮುಂದೆ ತನ್ನ ವಿಚಾರಣೆಯಲ್ಲಿ ಕ್ಲೈವ್ ತಾನು ಪ್ಲಾಸೀ ಯುದ್ಧದ ನಂತರ ಪ್ರಶಂಸನೀಯ ಸಂಯಮವನ್ನು ತೋರಿದಂತೆ ತಿಳಿಸಿದನು. ಆತನು ಹೀಗೆ ಹೇಳಿದನು :

ಪ್ಲಾಸಿಯ ವಿಜಯವು ನನ್ನನ್ನು ಯಾವ ಪರಿಸ್ಥಿತಿಯಲ್ಲಿ ಇರಿಸಿದೆ ಎಂಬುದನ್ನು ಪರಿಗಣಿಸಿ! ಒಬ್ಬ ಮಹಾನ್ ರಾಜಕುಮಾರ ನನ್ನ ಸಂತೋಷವನ್ನು ಅವಲಂಬಿಸಿದ್ದಾನೆ: ಒಂದು ಸುಸಂಪನ್ನ ನಗರವು ನನ್ನ ಕರುಣೆಯ ಮೇಲೆ ಆಧಾರಪಟ್ಟಿದೆ: ಶ್ರೀಮಂತನಾದ ವ್ಯಾಪಾರಿಗಳು ನನ್ನ ಚಿರುನಗೆಗಾಗಿ ಪರಸ್ಪರರ ವಿರುದ್ಧ ಸ್ಪರ್ಧಿಸುತ್ತಿದ್ದರು : ಚಿನ್ನ ಮತ್ತು ರತ್ನದ ರಾಶಿಗಳು ಎರಡು ಕಡೆ ಇರುವ ಕಮಾನುಗಳ ಮೂಲಕ ನಾನು ಏಕಾಂಗಿಯಾಗಿ ನಡೆದಿದ್ದೇನೆ. ಮಿಸ್ಟರ್ ಚೇರ್ಮನ್! ನನ್ನ ವೈಭವಕ್ಕೆ ನಾನೇ ಆಶ್ಚರ್ಯ ಪಡುತ್ತಿದ್ದೇನೆ ಎಂದು ತನ್ನ ಅಸ್ತಿತ್ವವನ್ನು ತೋರಿಸಿಕೊಂಡನು.

**ಚಟುವಟಿಕೆ**

ನೀವು ಕೆಲವು ತಿಂಗಳುಗಳಿಂದ ಭಾರತದೇಶದಲ್ಲಿರುವ ಒಂದು ಯುವ ಕಂಪನಿಯ ಅಧಿಕಾರಿ ಎಂದು ಕಲ್ಪಿಸಿಕೊಳ್ಳಿರಿ. ಬ್ರಿಟನ್‌ನಲ್ಲಿ ನಿಮ್ಮ ಹಿಂದಿನ ಜೀವನಕ್ಕೂ ಮತ್ತು ಇಲ್ಲಿ ನೀವು ಅನುಭವಿಸುತ್ತಿರುವ ಐಶಾರಾಮಿ ಜೀಜನಕ್ಕೆ ನಡುವೆ ಇರುವ ವ್ಯತ್ಯಾಸಗಳನ್ನು ತಿಳಿಸುತ್ತಾ ನಿಮ್ಮ ತಾಯಿಗೆ ಒಂದು ಪತ್ರ ಬರೆಯಿರಿ.



https://amaravathiteacher.com



***ಚಿತ್ರ-7*** ಅವದ್ ನವಾಬ ಶುಜಾವುದ್ದೌಲಾ ಆತನ ಪುತ್ರರು ಮತ್ತು ಬ್ರಿಟೀಷ್ ರೆಸಿಡೆಂಟ್‌ನೊಂದಿಗೆ.
ಚಿತ್ರಕಾರ ಟೆಲ್ಲಿ ಕೆಟಲ್ (*1772*)
ಬಕ್ಸರ್ ಕದನದ ನಂತರ ಒಪ್ಪಂದಗಳಿಂದ ನವಾಬ್ ಶುಜಾವುದ್ದೌಲನು ತನ್ನ ಅಧಿಕಾರದ ಹೆಚ್ಚಿನ ಭಾಗವನ್ನು ಬಿಟ್ಟುಕೊಡಬೇಕಾಯಿತು. ಆದರೂ ಇಲ್ಲಿ ರೆಸಿಡೆಂಟನಿಗಿಂತ ಕೂಡಾ ಆತನು ರಾಜದರ್ಪ ಮತ್ತು ಹಿರಿಮೆಯನ್ನು ತೋರಿಸುತ್ತಿದ್ದಾನೆ.

**ತಡೆಯಾಜ್ಞೆ** - ಸೂಚನೆ (ಆದೇಶ)
**ಅಧೀನತೆ** - ವಿಧೇಯತೆ

ರಕ್ಷಣೆ ಕಲ್ಪಿಸಲು ಅವಶ್ಯಕವಾದ ಸಹಾಯಕ ಸೈನ್ಯವನ್ನು ನಿರ್ವಹಿಸಲು ಹಣವನ್ನು ಕಂಪನಿಗೆ ಪಾವತಿಸಬೇಕಾಗುತ್ತಿತ್ತು. ಒಂದು ವೇಳೆ ಈ ಭಾರತೀಯ ಆಡಳಿತಗಾರರು ಪಾವತಿ ಮಾಡಲು ವಿಫಲವಾದರೆ ನಂತರ ಅವರ ಭೂಭಾಗದಲ್ಲಿ ಸ್ವಲ್ಪ ಭಾಗವನ್ನು ಪರಿಹಾರವಾಗಿ ತೆಗೆದುಕೊಳ್ಳಲಾಗುತ್ತಿತ್ತು. ಉದಾಹರಣೆಗೆ ರಿಚರ್ಡ್ ವೆಲ್ಲೆಸ್ಲಿ ಗವರ್ನರ್ ಜನರಲ್ ಆಗಿದ್ದಾಗ (1798-1805) ಅವದ್ ನವಾಬನು 1801ರಲ್ಲಿ ಸಹಾಯಕ ಸೈನ್ಯಕ್ಕೆ ಪಾವತಿಸಲು ವಿಫಲವಾದ ಕಾರಣ ತನ್ನ ಅರ್ಧದಷ್ಟು ಪ್ರದೇಶವನ್ನು ಕಂಪನಿಗೆ ನೀಡುವಂತೆ ಒತ್ತಾಯಿಸಲಾಯಿತು. ಹೈದರಾಬಾದ್ ಕೂಡಾ ಇದೇ ಆಧಾರದ ಮೇಲೆ ಪ್ರದೇಶಗಳನ್ನು ಬಿಟ್ಟುಕೊಡುವಂತೆ ಒತ್ತಡ ತಂದರು.

4ನೇ ಮೂಲಾಧಾರ

### ರೆಸಿಡೆಂಟನಿಗೆ ಎಂತಹ ಅಧಿಕಾರ ಇರುತ್ತದೆ?

ಇದು ಜೇಮ್ಸ್ ಮಿಲ್ ಎನ್ನುವ ಪ್ರಸಿದ್ಧ ಸ್ಕಾಟ್ಲೆಂಡಿನ ಅರ್ಥಶಾಸ್ತ್ರಜ್ಞ ಮತ್ತು ರಾಜಕೀಯ ತತ್ವಜ್ಞಾನಿಯ ಕಂಪನಿಯಿಂದ ನೇಮಕಗೊಂಡ ರೆಸಿಡೆಂಟ್‌ಗಳ ಕುರಿತು ಬರೆದಿರುವುದು.

> ನಾವು ಒಬ್ಬ ರೆಸಿಡೆಂಟನನ್ನು ನೇಮಕ ಮಾಡಿದೆವು. ದೇಶಕ್ಕೆ ಆತನೇ ನಿಜವಾದ ರಾಜನ ಕೂಡ. ಆತನು ಎಂತಹ ಹಸ್ತಕ್ಷೇಪವಿರದ **ತಡೆಯಾಜ್ಞೆ**ಗಳನ್ನು ನೀಡಬಹುದು. ಆ ಯುವರಾಜನು ಅವುಗಳಿಗೆ ಸಂಪೂರ್ಣವಾಗಿ **ಅಧೀನವಾಗಿ** ವರ್ತಿಸುವವರೆಗೆ ಮತ್ತು ರೆಸಿಡೆಂಟ್‌ಗಳಿಗೆ, ಅಂದರೆ ಬ್ರಿಟೀಷ್ ಸರ್ಕಾರಕ್ಕೆ ಸಮ್ಮತವಾದದ್ದನ್ನು ಮಾಡುವವರೆಗೆ ವಿಷಯಗಳು ಶಾಂತವಾಗಿ ನಡೆಯುತ್ತವೆ. ಅವರ ಆಡಳಿತ ವ್ಯವಹಾರಗಳಲ್ಲಿ ರೆಸಿಡೆಂಟನು ಹೆಚ್ಚು ಹಸ್ತಕ್ಷೇಪ ಮಾಡದಂತೆ ನೋಡಿಕೊಳ್ಳುವ ವರೆಗೆ ಇದು ಚೆನ್ನಾಗಿರುತ್ತದೆ..... ಆದರೆ ಇದಕ್ಕೆ ವಿರುದ್ಧವಾಗಿ ಏನಾದರೂ ಸಂಭವಿಸಿದಾಗ ರಾಜಕುಮಾರನು ತೆಗೆದುಕೊಂಡ ಕ್ರಮವನ್ನು ಬ್ರಿಟೀಷ್ ಸರ್ಕಾರವು ತಪ್ಪು ಎಂದು ಭಾವಿಸಿದಾಗ ಘರ್ಷಣೆಗಳು ಮತ್ತು ಅಡಚಣೆಗಳು ಬರುತ್ತವೆ.

## ಟಿಪ್ಪು ಸುಲ್ತಾನ್ - " ಮೈಸೂರು ಹುಲಿ"



***ಚಿತ್ರ-8*** ಟಿಪ್ಪು ಸುಲ್ತಾನ್

ಕಂಪನಿ ತನ್ನ ರಾಜಕೀಯ ಮತ್ತು ಆರ್ಥಿಕ ಹಿತಾಸಕ್ತಿಗಳಿಗೆ ಭಂಗ ಉಂಟಾದಾಗ ನೇರ ಮಿಲಿಟರಿ ಹೋರಾಟಗಳಿಗೆ ನಿಂತಿತು. ಇದನ್ನು ದಕ್ಷಿಣ ಭಾರತದ ಮೈಸೂರು ರಾಜ್ಯದ ಪ್ರಕರಣದಿಂದ ವಿವರಿಸಬಹುದು.

ಮೈಸೂರ್ ಹೈದರ್ ಅಲೀ (1761 ರಿಂದ 1782), ಆತನ ಪುತ್ರ ಪ್ರಸಿದ್ಧ ಟಿಪ್ಪು ಸುಲ್ತಾನ್‌ರಂತಹ (1782 ರಿಂದ 1799) ಪ್ರಬಲ ಆಡಳಿತಗಾರರ ನಾಯಕತ್ವದಲ್ಲಿ ಮೈಸೂರು ಬಲವಾದ ರಾಜ್ಯವಾಗಿ ಬೆಳೆದಿತ್ತು. ಮಲಬಾರ್ ತೀರದಲ್ಲಿ ನಡೆಯುವ ಲಾಭದಾಯಕವಾದ ವ್ಯಾಪಾರವನ್ನು ಮೈಸೂರು ರಾಜ್ಯ ತನ್ನ ನಿಯಂತ್ರಣದಲ್ಲಿಟ್ಟುಕೊಂಡಿತ್ತು. ಕಂಪನಿಯವರು ಇಲ್ಲಿಂದ ಮೆಣಸು ಮತ್ತು ಏಲಕ್ಕಿಯನ್ನು ಕೊಂಡುಕೊಳ್ಳುತ್ತಿದ್ದರು. 1785 ರಲ್ಲಿ ಟಿಪ್ಪುಸುಲ್ತಾನ್ ತನ್ನ ಸಾಮ್ರಾಜ್ಯದ ಬಂದರುಗಳ ಮೂಲಕ ಶ್ರೀಗಂಧದ ಮರ, ಮೆಣಸು ಮತ್ತು ಏಲಕ್ಕಿಗಳನ್ನು ರಫ್ತು ಮಾಡುವುದನ್ನು ನಿಲ್ಲಿಸಿದನು ಮತ್ತು ಸ್ಥಳೀಯ ವ್ಯಾಪಾರಿಗಳಿಗೆ ಕಂಪನಿಯೊಂದಿಗೆ ವ್ಯಾಪಾರ ಮಾಡಲು ಅನುಮತಿ ನೀಡಲಿಲ್ಲ.



https://amaravathiteacher.com




*ಚಿತ್ರ-9 : ಕಾರ್ನ್‌ವಾಲೀಸ್ ಟಿಪ್ಪು ಸುಲ್ತಾನನ ಮಕ್ಕಳನ್ನು ಒತ್ತೆಯಾಳುಗಳಾಗಿ ಸ್ವಾಗತಿಸುತ್ತಿದ್ದಾನೆ. 1793 ರಲ್ಲಿ ಡೇನಿಯಲ್ ಓರ್ಮೆ ಬಿಡಿಸಿದ ಚಿತ್ರ*

ಕಂಪನಿಯ ಪಡೆಗಳು ಹೈದರ್‌ಅಲಿ ಮತ್ತು ಟಿಪ್ಪು ಸುಲ್ತಾನನಿಂದ ಅನೇಕ ಯುದ್ಧಗಳಲ್ಲಿ ಸೋಲಿಸಲ್ಪಟ್ಟವು ಆದರೆ 1792ರಲ್ಲಿ ಮರಾಠರು, ಹೈದರಾಬಾದ್ ನಿಜಾಮರು ಮತ್ತು ಕಂಪನಿಯ ಸಂಯೋಜಿತ ಪಡೆಗಳು ಮಾಡಿದ ದಾಳಿಯಲ್ಲಿ ಟಿಪ್ಪುನನ್ನು ಬ್ರಿಟೀಷರೊಂದಿಗೆ ಒಪ್ಪಂದಕ್ಕೆ ಸಹಿ ಹಾಕುವಂತೆ ಒತ್ತಾಯಿಸಿದರು. ಇದರಿಂದ ಆತನ ಇಬ್ಬರು ಪುತ್ರರನ್ನು ಒತ್ತೆಯಾಳುಗಳಾಗಿ ಕರೆದೊಯ್ಯಲಾಯಿತು. ಬ್ರಿಟೀಷ್ ವರ್ಣ ಚಿತ್ರಕಾರರು ಯಾವಾಗಲೂ ಬ್ರಿಟೀಷ್ ಅಧಿಕಾರಿಗಳ ವಿಜಯೋತ್ಸವವನ್ನು ತೋರುವ ದೃಶ್ಯಗಳನ್ನು ಚಿತ್ರಿಸಲು ಇಷ್ಟಪಡುತ್ತಿದ್ದರು.

ಆತನು ಭಾರತದೇಶದಲ್ಲಿರುವ ಫ್ರೆಂಚರೊಂದಿಗೆ ನಿಕಟ ಸಂಬಂಧವನ್ನು ಸ್ಥಾಪಿಸಿದನು ಮತ್ತು ಅವರ ಸಹಾಯದಿಂದ ತನ್ನ ಸೈನ್ಯವನ್ನು ಆಧುನೀಕರಿಸಿಕೊಂಡನು.

ಇದರಿಂದ ಬ್ರಿಟೀಷರಿಗೆ ಕೋಪ ಬಂದಿತು. ಅವರು ಹೈದರ್ ಮತ್ತು ಟಿಪ್ಪುಗಳನ್ನು ಮಹತ್ವಾಕಾಂಕ್ಷೆಯ, ಸೊಕ್ಕಿನ ಮತ್ತು ಅಪಾಯಕಾರಿ ಎಂದು ಭಾವಿಸಿ - ಈ ಆಡಳಿತಗಾರರನ್ನು ನಿಯಂತ್ರಿಸಬೇಕೆಂದೂ ಮತ್ತು ಹತ್ತಿಕ್ಕಬೇಕು ಎಂದುಕೊಂಡರು. ಮೈಸೂರಿನೊಂದಿಗೆ ನಾಲ್ಕು ಯುದ್ಧಗಳು ನಡೆದವು(1767-69, 1780-84, 1790-92 ಮತ್ತು 1799ರಲ್ಲಿ) ಕೊನೆಯದಾಗಿ ಶ್ರೀರಂಗಪಟ್ಟಣ ಯುದ್ಧದಲ್ಲಿ ಕಂಪನಿಯು ಅಂತಿಮವಾಗಿ ವಿಜಯವನ್ನು ಸಾಧಿಸಿತು. ಟಿಪ್ಪು ಸುಲ್ತಾನ್ ತನ್ನ ರಾಜಧಾನಿ ಶ್ರೀರಂಗಪಟ್ಟಣವನ್ನು ಸಂರಕ್ಷಿಸುವ ಪ್ರಯತ್ನದಲ್ಲಿ ಮರಣ ಹೊಂದಿದನು. ಮೈಸೂರನ್ನು ಹಿಂದಿನ ರಾಜವಂಶವಾದ ಒಡೆಯರ್‌ಗಳ ಆಡಳಿತದ ಅಡಿಯಲ್ಲಿ ಇಟ್ಟರು. ಈ ರಾಜ್ಯದ ಮೇಲೆ ಸಹಾಯಕ ಸೈನ್ಯ ಪದ್ಧತಿಯನ್ನು ಹೇರಲಾಯಿತು.



*ಚಿತ್ರ-10 : ಟಿಪ್ಪುವಿನ ಗೊಂಬೆ ಹುಲಿ*

ಇದು ಟಿಪ್ಪು ಬಳಿಯಿದ್ದ ದೊಡ್ಡ ಯಾಂತ್ರಿಕ ಆಟಿಕೆಯ ಚಿತ್ರ. ಯೂರೋಪಿಯನ್ ಸೈನಿಕರನ್ನು ಹುಲಿ ಕಚ್ಚುವುದನ್ನು ನೀವು ನೋಡಬಹುದು. ಅದರ ಹಿಡಿಕೆಯನ್ನು ತಿರುಗಿಸಿದಾಗ ಆಟಿಕೆ ಹುಲಿ ಘರ್ಜಿಸುವುದು ಮತ್ತು ಸೈನಿಕನು ಕಿರುಚುವನು. ಈ ಆಟಿಕೆ ಹುಲಿಯನ್ನು ಈಗ ಲಂಡನ್ನಿನ ವಿಕ್ಟೋರಿಯಾ ಮತ್ತು ಆಲ್ಬರ್ಟ್ ಮ್ಯೂಜಿಯಂನಲ್ಲಿ ಇರಿಸಲಾಗಿದೆ. ಟಿಪ್ಪು ಸುಲ್ತಾನ್ ತನ್ನ ರಾಜಧಾನಿ ಶ್ರೀರಂಗಪಟ್ಟಣವನ್ನು ಸಂರಕ್ಷಿಸುವ ಪ್ರಯತ್ನದಲ್ಲಿ 4 ಮೇ 1799ರಲ್ಲಿ ಮರಣ ಹೊಂದಿದಾಗ ಬ್ರಿಟೀಷರು ಇದನ್ನು ತೆಗೆದುಕೊಂಡು ಹೋದರು.

### ಟಿಪ್ಪುವಿನ ಘನ ಚರಿತ್ರೆ

ರಾಜರ ಸುತ್ತಲೂ ಸಾಮಾನ್ಯವಾಗಿ ಕಥೆಗಳನ್ನು ಕಟ್ಟುವರು - ಅವರ ಶಕ್ತಿಯನ್ನು ಜಾನಪದ ಕಥೆಗಳ ಮೂಲಕ ಕೀರ್ತಿಸುವರು. 1782ರಲ್ಲಿ ಮೈಸೂರಿನ ದೊರೆಯಾದ ಟಿಪ್ಪು ಸುಲ್ತಾನನ ಬಗ್ಗೆ ಒಂದು ಕಥೆ ಇದೆ. ಒಮ್ಮೆ ಅವನು ಒಬ್ಬ ಫ್ರೆಂಚ್ ಸ್ನೇಹಿತನೊಂದಿಗೆ ಕಾಡಿನಲ್ಲಿ ಬೇಟೆಗೆ ಹೋದನು. ಅಲ್ಲಿ ಅವರಿಗೆ ಹುಲಿ ಎದುರಾಯಿತು. ಅವನ ತುಪಾಕಿ ಕೆಲಸ ಮಾಡಲಿಲ್ಲ ಮತ್ತು ಅವನ ಕಠಾರಿ ನೆಲಕ್ಕೆ ಬಿದ್ದಿತು. ಅವನು ಕೆಳಕ್ಕೆ ಬಾಗಿ ಕಠಾರಿಯನ್ನು ತೆಗೆದುಕೊಳ್ಳುವವರೆಗೂ ನಿರಾಯುಧನಾಗಿ ಹುಲಿಯೊಂದಿಗೆ ಹೋರಾಡಿದನು. ಕೊನೆಗೆ ಈ ಹೋರಾಟದಲ್ಲಿ ಹುಲಿಯನ್ನು ಕೊಂದನು. ಆನಂತರ ಈತನನ್ನು ''ಮೈಸೂರಿನ ಹುಲಿ'' ಎಂದು ಕರೆಯುತ್ತಿದ್ದರು. ಆತನ ಬಾವುಟದ ಮೇಲೆ ಹುಲಿಯ ಚಿಹ್ನೆ ಇರುತ್ತಿತ್ತು.



https://amaravathiteacher.com

## ಚಟುವಟಿಕೆ

ನೀವು ಶ್ರೀರಂಗಪಟ್ಟಣದ ಯುದ್ಧ ಮತ್ತು ಟಿಪ್ಪುಸುಲ್ತಾನನ ಮರಣದ ಕುರಿತು ವರದಿ ಮಾಡುವ ಎರಡು ಹಳೆಯ ಪತ್ರಿಕೆಗಳನ್ನು ಓದುತ್ತಿರುವಂತೆ ಊಹಿಸಿಕೊಳ್ಳಿ. ಅದರಲ್ಲಿ ಒಂದು ಬ್ರಿಟೀಷ್ ಪತ್ರಿಕೆಯಾದರೆ ಮತ್ತು ಇನ್ನೊಂದು ಮೈಸೂರಿನಿಂದ ಬಿಡುಗಡೆಯಾಗಿದ್ದು. ಈ ಎರಡು ಪತ್ರಿಕೆಗಳಲ್ಲಿ ಒಂದೊಂದರಲ್ಲಿ ಪ್ರಧಾನ ಶೀರ್ಷಿಕೆ ಏನಾಗಿರುತ್ತದೆಯೋ ಊಹಿಸಿ ಬರೆಯಿರಿ.

**ಒಕ್ಕೂಟ** - ಮೈತ್ರಿ



*ಚಿತ್ರ-11 : ಲಾರ್ಡ್ ಹೇಸ್ಟಿಂಗ್ಸ್*



*ಚಿತ್ರ-12 : ಕಿತ್ತೂರು ರಾಣಿ ವಿಗ್ರಹ (ಕರ್ನಾಟಕ)*

### ಮರಾಠರೊಂದಿಗೆ ಯುದ್ಧ

ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಕಂಪನಿಯು ಮರಾಠಾ ಶಕ್ತಿಯನ್ನು ನಿಯಂತ್ರಿಸಲು ಮತ್ತು ಅಂತಿಮವಾಗಿ ನಾಶಮಾಡಬೇಕೆಂದು ಪ್ರಯತ್ನಿಸಿತು. 1761ರಲ್ಲಿ ನಡೆದ ಮೂರನೇ ಪಾಣಿಪತ್ ಕದನದಲ್ಲಿನ ಸೋಲಿನೊಂದಿಗೆ ದೆಹಲಿಯಿಂದ ಆಳ್ವಿಕೆ ನಡೆಸಬೇಕೆನ್ನುವ ಮರಾಠರ ಕನಸು ಭಗ್ನವಾಯಿತು. ಇವರನ್ನು ಅನೇಕ ರಾಜ್ಯಗಳಾಗಿ ವಿಭಜಿಸಿ ಸಿಂಧಿಯಾ, ಹೋಳ್ಕರ್, ಗಾಯಕ್ವಾಡ್ ಮತ್ತು ಭೋಂಸ್ಲೇಯಂತಹ ರಾಜವಂಶಗಳಿಗೆ ಸೇರಿದ ವಿವಿಧ ಮುಖ್ಯಸ್ಥರ ಅಡಿಯಲ್ಲಿ ಇಟ್ಟರು. ಈ ನಾಯಕರೆಲ್ಲಾ ಸೇರಿ ಒಂದು **ಒಕ್ಕೂಟ**ವಾಗಿ ಏರ್ಪಟ್ಟು ಪೂಣೆ ಕೇಂದ್ರವಾಗಿ ಕೆಲಸಮಾಡುವ ಶಕ್ತಿವಂತ ಸೈನ್ಯವಿರುವ ಪೇಶ್ವೆ (ಪ್ರಧಾನಮಂತ್ರಿ) ಅಡಿಯಲ್ಲಿ ಇರುತ್ತಿದ್ದರು. ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಮಹದಾಜಿ ಸಿಂಧಿಯಾ ಮತ್ತು ನಾನಾ ಫಡ್ನವೀಸ್ ಎನ್ನುವ ಇಬ್ಬರು ಮರಾಠಾ ಸೈನಿಕರು, ರಾಜನೀತಿಜ್ಞರಾಗಿ ಪ್ರಸಿದ್ಧಿ ಪಡೆದರು.

ಯುದ್ಧಗಳ ಸರಣಿಯಲ್ಲಿ ಮರಾಠರನ್ನು ವಶಪಡಿಸಿಕೊಳ್ಳಲಾಯಿತು. 1782ರಲ್ಲಿ ಸಲ್ಬಾಯಿ ಒಪ್ಪಂದದೊಂದಿಗೆ ಕೊನೆಗೊಂಡ ಮೊದಲ ಯುದ್ಧದಲ್ಲಿ ಸ್ಪಷ್ಟವಾದ ವಿಜಯಿ ಇರಲಿಲ್ಲ. ಎರಡನೇ ಆಂಗ್ಲೊ-ಮರಾಠಾ ಯುದ್ಧವು (1803–05) ವಿವಿಧ ರಂಗಗಳಲ್ಲಿ ಹೋರಾಡಲ್ಪಟ್ಟಿತು. ಇದರ ಪರಿಣಾಮವಾಗಿ ಬ್ರಿಟೀಷರು ಒರಿಸ್ಸಾ, ಆಗ್ರಾ ಮತ್ತು ದೆಹಲಿ ಸೇರಿದಂತೆ ಯಮುನಾ ನದಿಯ ಉತ್ತರದ ಪ್ರದೇಶಗಳನ್ನು ವಶಪಡಿಸಿಕೊಂಡರು. ಅಂತಿಮವಾಗಿ ಮೂರನೇ ಆಂಗ್ಲೋ-ಮರಾಠಾ ಯುದ್ಧವು (1817–19) ಮರಾಠರ ಶಕ್ತಿಯನ್ನು ಸಂಪೂರ್ಣವಾಗಿ ಅಡಗಿಸಿತು. ಪೇಶ್ವೆಯನ್ನು ತೊಲಗಿಸಿ ನಿವೃತ್ತಿ ವೇತನವನ್ನು ನೀಡಿ ಕಾನ್ಪೂರದ ಸಮೀಪದಲ್ಲಿರುವ ಬಿತ್ತೂರ್‌ಗೆ ಕಳುಹಿಸಲಾಯಿತು. ಈಗ ಕಂಪನಿಯು ವಿಂಧ್ಯದ ದಕ್ಷಿಣದ ಪ್ರದೇಶಗಳ ಮೇಲೆ ಸಂಪೂರ್ಣ ನಿಯಂತ್ರಣವನ್ನು ಹೊಂದಿತ್ತು.

### ಪರಮಾಧಿಕಾರದ ಹಕ್ಕು

ಹತ್ತೊಂಬತ್ತನೇ ಶತಮಾನದ ಆರಂಭದಿಂದ ಕಂಪನಿಯು ಪ್ರಾದೇಶಿಕ ವಿಸ್ತರಣೆಯ ವಿಷಯದಲ್ಲಿ ಆಕ್ರಮಣಕಾರಿ ನೀತಿಯನ್ನು ಅನುಸರಿಸಿತು ಎಂಬುದು ಮೇಲೆ ತಿಳಿಸಿದ ಅಂಶದಿಂದ ಸ್ಪಷ್ಟವಾಗುತ್ತದೆ. ಲಾರ್ಡ್ ಹೇಸ್ಟಿಂಗ್ಸ್ (1813 – 1823ರ ವರೆಗೆ ಗವರ್ನರ್ ಜನರಲ್) ಅಡಿಯಲ್ಲಿ "ಪರಮತ್ವ"ದ ಅಂತಸ್ಥಿನ ಹೊಸ ನೀತಿಯನ್ನು ಪ್ರಾರಂಭಿಸಲಾಯಿತು. ಅಂದರೆ ಭಾರತೀಯ ರಾಜ್ಯಗಳಿಗಿಂತ ತನ್ನ ಅಧಿಕಾರವೇ ಅತ್ಯುನ್ನತ ಮತ್ತು ಸರ್ವೋಚ್ಚವಾಗಿದೆ ಎಂದು ಕಂಪನಿ ಹೇಳಿಕೊಂಡಿತು. ತನ್ನ ಹಿತಾಸಕ್ತಿಗಳನ್ನು ರಕ್ಷಿಸುವ ಸಲುವಾಗಿ ಯಾವುದೇ ಭಾರತೀಯ ಸಾಮ್ರಾಜ್ಯವನ್ನು ಸ್ವಾಧೀನ ಪಡಿಸಿಕೊಳ್ಳುವ ಅಥವಾ ವಿಲೀನಗೊಳಿಸಿಕೊಳ್ಳುವ ಬೆದರಿಕೆಯನ್ನು ಸಮರ್ಥಿಸಿಕೊಳ್ಳಲಾರಂಭಿಸಿತು. ಈ ದೃಷ್ಟಿಕೋನವು ನಂತರ ಬ್ರಿಟೀಷ್ ನೀತಿಗಳಿಗೂ ಮಾರ್ಗದರ್ಶನ ನೀಡಿತು.

ಆದರೆ, ಈ ಪ್ರಕ್ರಿಯೆ ನಿರಂತರವಾಗಿ ಮುಂದುವರೆಯಲಿಲ್ಲ. ಉದಾಹರಣೆಗೆ ಬ್ರಿಟೀಷರು ಕಿತ್ತೂರು (ಇಂದಿನ ಕರ್ನಾಟಕ) ಎನ್ನುವ ಸಣ್ಣ ರಾಜ್ಯವನ್ನು ಸ್ವಾಧೀನ ಪಡಿಸಿಕೊಳ್ಳಲು ಪ್ರಯತ್ನಿಸಿದಾಗ ಅಲ್ಲಿಯ ರಾಣಿ ಚೆನ್ನಮ್ಮ ಶಸ್ತ್ರಾಸ್ತ್ರಗಳನ್ನು ಹಿಡಿದು ಬ್ರಿಟೀಷ್ ವಿರುದ್ಧ ಪ್ರತಿರೋಧ ಚಳುವಳಿಯನ್ನು ನಡೆಸಿದಳು. ಆಕೆಯನ್ನು 1824ರಲ್ಲಿ ಬಂಧಿಸಲಾಯಿತು ಮತ್ತು 1829ರಲ್ಲಿ ಸೆರೆಮನೆಯಲ್ಲಿ ನಿಧನಳಾದಳು. ಆದರೆ ಕಿತ್ತೂರಿನ ಸಂಗೊಳ್ಳಿಯ ಬಡ ಚೌಕೀದಾರ ರಾಯಣ್ಣನು ಈ ಪ್ರತಿರೋಧವನ್ನು ಮುಂದುವರೆಸಿದನು. ಜನಪ್ರಿಯ ಬೆಂಬಲದೊಂದಿಗೆ ರಾಯಣ್ಣನು ಅನೇಕ ಬ್ರಿಟೀಷ್ ಶಿಬಿರಗಳನ್ನು ಮತ್ತು ದಾಖಲೆಗಳನ್ನು ನಾಶಪಡಿಸಿದನು. 1830ರಲ್ಲಿ ಈತನನ್ನು ಬ್ರಿಟೀಷರು ಹಿಡಿದು ಗಲ್ಲಿಗೇರಿಸಲಾಯಿತು. ಈ ಪುಸ್ತಕದಲ್ಲಿ ನಂತರ ನಡೆದ ಇಂತಹ ಪ್ರತಿರೋಧದ ಹಲವಾರು ಪ್ರಕರಣಗಳನ್ನು ಕುರಿತು ನೀವು ಓದುತ್ತೀರಿ.



https://amaravathiteacher.com

1830 ರ ದಶಕದ ಉತ್ತರಾರ್ಧದಲ್ಲಿ ಈಸ್ಟ್ ಇಂಡಿಯಾ ಕಂಪನಿಯು ರಷ್ಯಾದ ಬಗ್ಗೆ ಚಿಂತಿಸತೊಡಗಿತು. ರಷ್ಯಾ ಏಷ್ಯಾದಾದ್ಯಂತ ವಿಸ್ತರಿಸಿ ವಾಯುವ್ಯದಿಂದ ಭಾರತದೇಶವನ್ನು ಪ್ರವೇಶಿಸಬಹುದು ಎಂದು ಅದು ಊಹಿಸಿತು. ಈ ಭಯದಿಂದ ಬ್ರಿಟೀಷರು ಈಗ ವಾಯುವ್ಯದ ಮೇಲೆ ತಮ್ಮ ನಿಯಂತ್ರಣವನ್ನು ಸುಸ್ಥಿರಗೊಳಿಸಲು ಬಯಸಿದರು. 1838 ಮತ್ತು 1842ರ ನಡುವೆ ಆಫ್ಘಾನಿಸ್ತಾನದೊಂದಿಗೆ ಸುದೀರ್ಘ ಯುದ್ದವನ್ನು ನಡೆಸಿ ಅಲ್ಲಿ ಪರೋಕ್ಷವಾಗಿ ಕಂಪನಿಯ ಆಡಳಿತವನ್ನು ಸ್ಥಾಪಿಸಿದರು. 1843ರಲ್ಲಿ ಸಿಂಧ್‌ನ್ನು ಸ್ವಾಧೀನಪಡಿಸಿಕೊಂಡರು. ಇನ್ನು ನಂತರ ಸರದಿಯಲ್ಲಿ ಉಳಿದಿದ್ದು ಪಂಜಾಬ್. ಆದರೆ ಅಲ್ಲಿ ಮಹಾರಾಜ ರಂಜಿತ್‌ಸಿಂಗ್‌ನ ಉಪಸ್ಥಿತಿಯು ಕಂಪನಿಯನ್ನು ಹಿಮ್ಮೆಟ್ಟಿಸುವಂತೆ ಮಾಡಿತು. 1839ರಲ್ಲಿ ಆತನ ಮರಣದ ನಂತರ ಸಿಖ್ ರಾಜ್ಯದೊಂದಿಗೆ ಎರಡು ಸುದೀರ್ಘ ಯುದ್ಧಗಳು ನಡೆದವು. ಪ್ರತಿಫಲವಾಗಿ 1849ರಲ್ಲಿ ಪಂಜಾಬಿನ ವಿಲೀನವಾಯಿತು.



*ಚಿತ್ರ-13 : ಮಹಾರಾಜಾ ರಂಜಿತ್‌ಸಿಂಗ್ ಕೋರ್ಟಿನ ನಿರ್ವಹಣೆ*

## ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ

1848 ರಿಂದ 1856ರ ವರೆಗೆ ಗವರ್ನರ್ ಜನರಲ್ ಆಗಿ ಕೆಲಸ ಮಾಡಿದ ಲಾರ್ಡ್ ಡಲ್ಹೌಸಿ ಕಾಲದಲ್ಲಿ ಅಂತಿಮವಾಗಿ ಅನೇಕ ಭೂಭಾಗಗಳು ಸೇರ್ಪಡೆ ಮಾಡಲಾಗಿದೆ. ಇವನು ಜಾರಿಗೆ ತಂದ ನೀತಿಯನ್ನು ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ ಎಂದು ಕರೆಯಲಾಯಿತು. ಈ ನೀತಿಯ ಪ್ರಕಾರ ಒಬ್ಬ ಭಾರತೀಯ ಆಡಳಿತಗಾರನು ಪುರುಷ ಉತ್ತರಾಧಿಕಾರಿ ಇಲ್ಲದೆ ಸತ್ತರೆ ಅವನು ರಾಜ್ಯವನ್ನು ಕಳೆದುಕೊಳ್ಳುವನು. ಆ ರಾಜ್ಯ ಕಂಪನಿಯ ಪ್ರದೇಶದ ಭಾಗವಾಗುತ್ತದೆ. ಸತಾರಾ (1848), ಸಂಬಲ್‌ಪೂರ್ (1850), ಉದಯ್‌ಪೂರ್ (1852), ನಾಗಪೂರ್ (1853), ಝಾನ್ಸಿ (1854) - ಹೀಗೆ ಒಂದು ರಾಜ್ಯದ ನಂತರ ಮತ್ತೊಂದನ್ನು ಈ ನೀತಿಯನ್ನು ಅನ್ವಯಿಸುವ ಮೂಲಕ ಸರಳವಾಗಿ ಸೇರಿಸಲಾಯಿತು.

ಅಂತಿಮವಾಗಿ, 1856ರಲ್ಲಿ ಕಂಪನಿಯು ಅವದ್ ಅನ್ನು ಸ್ವಾಧೀನ ಪಡಿಸಿಕೊಂಡಿತು. ಈ ಬಾರಿ ಬ್ರಿಟೀಷರು ಮತ್ತೊಂದು ಪದವನ್ನು ಜೋಡಿಸಿದರು - ನವಾಬನ 'ದುರಾಡಳಿತ' ದಿಂದ ಜನರನ್ನು ಮುಕ್ತಗೊಳಿಸಲು ಅವದ್ ಅನ್ನು ಸ್ವಾಧೀನ ಪಡಿಸಿಕೊಳ್ಳುವುದು ಅವರ 'ಬಾಧ್ಯತೆಯುತವಾದ ಕರ್ತವ್ಯ' ಎಂದು ಹೇಳಿಕೊಂಡರು! ಅವಮಾನಕರ ರೀತಿಯಲ್ಲಿ ನವಾಬನನ್ನು ಪದಚ್ಯುತಗೊಳಿಸಿದ್ದರಿಂದ ಕೋಪಗೊಂಡ ಅವಧ್ ಜನರು 1857ರಲ್ಲಿ ಭುಗಿಲೆದ್ದ ಮಹಾನ್ ದಂಗೆಯಲ್ಲಿ ಪಾಲ್ಗೊಂಡರು.



*ಚಿತ್ರ-14 : ವೀರ್ ಸುರೇಂದ್ರ ಸಾಯಿ ವರ್ಣಚಿತ್ರ*

**ಚಟುವಟಿಕೆ**


ನೀವು ಎಂದಾದರೂ ಒಂದು ದಿನ ರಾಜರಾಗುತ್ತೀರಿ ಎಂದು ಭಾವಿಸುತ್ತಾ ಬೆಳೆದ ಒಬ್ಬ ನವಾಬನ ಸೋದರಳಿಯ ಎಂದು ಭಾವಿಸಿಕೊಳ್ಳಿರಿ. ಆದರೆ ಪ್ರಸ್ತುತ ಹೊಸದಾಗಿ ಬಂದ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯ ಪ್ರಕಾರ ನೀವು ಬ್ರಿಟೀಷರಿಂದ ರಾಜನಾಗಿ ಅನುಮತಿಸಲ್ಪಡುವುದಿಲ್ಲ ಎಂದು ತಿಳಿದುಕೊಂಡಿದ್ದೀರಿ. ನಿಮ್ಮ ಭಾವನೆಗಳೇನು? ವಾರಸುದಾರನಾಗಿ ಸಿಂಹಾಸನವೇರಲು ನೀವು ಎಂತಹ ಯೋಜನೆಯನ್ನು ರಚಿಸುತ್ತೀರಿ?




https://amaravathiteacher.com




*ಚಿತ್ರ-14 ಎ : ಭಾರತದೇಶ 1797*




*ಚಿತ್ರ-14 ಬಿ : ಭಾರತದೇಶ 1840*




*ಚಿತ್ರ-14 ಸಿ : ಭಾರತದೇಶ , 1857*

***ಚಿತ್ರ-14* ಎ,ಬಿ,ಸಿ : ಭಾರತದೇಶದಲ್ಲಿ ಬ್ರಿಟೀಷ್ ಪ್ರಾದೇಶಿಕ ಅಧಿಕಾರದ ವಿಸ್ತರಣೆ**

ಭಾರತದೇಶದ ಇಂದಿನ ರಾಜಕೀಯ ನಕ್ಷೆಯೊಂದಿಗೆ ಈ ನಕ್ಷೆಗಳನ್ನು ನೋಡಿ. ಈ ಪ್ರತಿಯೊಂದು ನಕ್ಷೆಯಲ್ಲಿ ಬ್ರಿಟೀಷ್ ಆಳ್ವಿಕೆಯಲ್ಲಿಲ್ಲದ ಭಾರತದ ವಿವಿಧ ಪ್ರಾಂತಗಳನ್ನು ಗುರ್ತಿಸಲು ಪ್ರಯತ್ನಿಸಿರಿ.



https://amaravathiteacher.com

## ಹೊಸ ಆಡಳಿತ ವಿಧಾನವನ್ನು ಪ್ರಾರಂಭಿಸುವುದು


ಕಂಪನಿಯ ಅಧಿಕಾರದ ವಿಸ್ತರಣೆಯಲ್ಲಿ ಮಹತ್ವದ ಪಾತ್ರ ವಹಿಸಿದ ಅನೇಕ ಪ್ರಮುಖ ವ್ಯಕ್ತಿಗಳಲ್ಲಿ ವಾರೆನ್ ಹೇಸ್ಟಿಂಗ್ಸ್(1773 ರಿಂದ 1785ರ ವರೆಗೆ ಗವರ್ನರ್ ಜನರಲ್) ಒಬ್ಬರು. ಆತನು ಬರುವ ಸಮಯಕ್ಕೆ ಕಂಪನಿಯು ಬಂಗಾಳದಲ್ಲಿ ಮಾತ್ರವಲ್ಲದೆ ಬಾಂಬೆ ಮತ್ತು ಮದ್ರಾಸ್‌ಗಳಲ್ಲಿಯೂ ಸಹ ಅಧಿಕಾರವನ್ನು ಕೈವಶ ಮಾಡಿಕೊಂಡಿತ್ತು. ಬ್ರಿಟೀಷ್ ಪ್ರಾಂತ್ಯಗಳನ್ನು ಸ್ಥೂಲವಾಗಿ ಪ್ರೆಸಿಡೆನ್ಸಿ ಎಂದು ಕರೆಯಲಾಗುವ ಆಡಳಿತಾತ್ಮಕ ಘಟಕಗಳಾಗಿ ವಿಂಗಡಿಸಲಾಗಿತ್ತು. ಬಂಗಾಳ, ಮದ್ರಾಸ್ ಮತ್ತು ಬಾಂಬೆ ಎನ್ನುವ ಮೂರು ಪ್ರೆಸಿಡೆನ್ಸಿಗಳು ಗವರ್ನರ್‌ನ ಆಡಳಿತದಲ್ಲಿದ್ದವು. ಆಡಳಿತದ ಸರ್ವೋಚ್ಚ ಅಧಿಕಾರ ಗವರ್ನರ್ ಜನರಲ್ ಕೈಯಲ್ಲಿರುತ್ತಿತ್ತು. ಮೊಟ್ಟ ಮೊದಲ ಗವರ್ನರ್ ಜನರಲ್‌ನಾದ ವಾರನ್ ಹೇಸ್ಟಿಂಗ್ಸ್ ವಿಶೇಷವಾಗಿ ನ್ಯಾಯ ಕ್ಷೇತ್ರದಲ್ಲಿ ಹಲವಾರು ಆಡಳಿತಾತ್ಮಕ ಸುಧಾರಣೆಗಳನ್ನು ಪ್ರವೇಶ ಪಡಿಸಿದನು.

1772 ರಿಂದ ಹೊಸ ನ್ಯಾಯವ್ಯವಸ್ಥೆಯು ಜಾರಿಗೆ ಬಂದಿತು. ಪ್ರತಿ ಜಿಲ್ಲೆಯಲ್ಲಿಯೂ ಕ್ರಿಮಿನಲ್ ನ್ಯಾಯಾಲಯ (ಫೌಜ್ದಾರಿ ಅದಾಲತ್) ಮತ್ತು ಸಿವಿಲ್ ನ್ಯಾಯಾಲಯ (ದಿವಾನಿ ಅದಾಲತ್) ಎನ್ನುವ ಎರಡು ನ್ಯಾಯಾಲಯಗಳು ಇರುತ್ತವೆ. ಮೌಲ್ವಿಗಳು ಮತ್ತು ಹಿಂದೂ ಪಂಡಿತರು ಸಿವಿಲ್ ನ್ಯಾಯಾಲಯಗಳ ಅಧ್ಯಕ್ಷತೆ ವಹಿಸಿದ್ದ ಯೂರೋಪಿಯನ್ ಜಿಲ್ಲಾಧಿಕಾರಿಗಳಿಗೆ ಭಾರತೀಯ ಕಾನೂನುಗಳನ್ನು ವ್ಯಾಖ್ಯಾನಿಸಿದರು. ಕ್ರಿಮಿನಲ್ ನ್ಯಾಯಾಲಯಗಳು ಇನ್ನೂ **ಖಾಜಿ** ಮತ್ತು **ಮುಫ್ತಿ** ಅಡಿಯಲ್ಲಿದ್ದು ಕಲೆಕ್ಟರ್‌ಗಳ ಮೇಲ್ವಿಚಾರಣೆಯಲ್ಲಿ ಕೆಲಸ ಮಾಡುತ್ತಿದ್ದವು.

**ಖಾಜಿ :** ನ್ಯಾಯಾಧೀಶರು

**ಮುಫ್ತೀ :** ಖಾಜಿ ನೀಡಿದ ತೀರ್ಪುಗಳನ್ನು ವಿವರಿಸುವ ಜವಾಬ್ದಾರಿ ಇರುವ ಮುಸ್ಲಿಂ ಸಮುದಾಯದ ಒಬ್ಬ ನ್ಯಾಯ ಶಾಸ್ತ್ರಜ್ಞ

**ದೋಷಾರೋಪಣೆ :** ಇಂಗ್ಲೆಂಡಿನ ಹ್‌ಸ್ ಆಫ್ ಕಾಮನ್ಸ್‌ನ ಒಬ್ಬ ವ್ಯಕ್ತಿಯ ವಿರುದ್ದ ದುಷ್ಕೃತ್ಯದ ಆರೋಪಗಳಿಗಾಗಿ ಹೌಸ್ ಆಫ್ ಲಾರ್ಡ್ಸ್‌ನಲ್ಲಿ ವಿಚಾರಣೆ ಕೈಗೊಳ್ಳುವುದು



***ಚಿತ್ರ-15 :** ವಾರೆನ್ ಹೇಸ್ಟಿಂಗ್ಸ್ ವಿಚಾರಣೆ, ಆರ್.ಜಿ. ಪೋಲಾರ್ಡ್ ಚಿತ್ರೀಕರಣ, 1789*

1785ರಲ್ಲಿ ವಾರೆನ್ ಹೇಸ್ಟಿಂಗ್ಸ್ ಇಂಗ್ಲೆಂಡಿಗೆ ಹಿಂತಿರುಗಿದಾಗ ಬಂಗಾಳದಲ್ಲಿಯ ದುರಾಡಳಿತಕ್ಕೆ ಆತನನ್ನು ವೈಯಕ್ತಿಕವಾಗಿ ಹೊಣೆಗಾರನನ್ನಾಗಿ ಮಾಡುತ್ತಾ ಎಡ್ಮಂಡ್ ಬರ್ಕ್ ಆರೋಪಣೆ ಮಾಡಿದನು. ಇದು ಏಳು ವರ್ಷಗಳ ಕಾಲ ಬ್ರಿಟೀಷ್ ಸಂಸತ್ತಿನಲ್ಲಿ ಮುಂದುವರೆದ **ದೋಷಾರೋಪಣೆ** ಪ್ರಕ್ರಿಯೆಗೆ ಕಾರಣವಾಯಿತು.



https://amaravathiteacher.com

**"ಎಲ್ಲರ ಸಾಮಾನ್ಯ ಶತೃ ಮತ್ತು ದಬ್ಬಾಳಿಕೆಗಾರರನ್ನು ನಾನು ದೋಷಾರೋಪಣೆ ಮಾಡುತ್ತೇನೆ"**

ವಾರೆನ್ ಹೇಸ್ಟಿಂಗ್ಸ್‌ನ ದೋಷಾರೋಪಣೆಯ ಸಮಯದಲ್ಲಿ ಎಡ್ಮಂಡ್ ಬರ್ಕ್‌ರ ಆರಂಭಿಕ ಭಾಷಣದ ಒಂದು ಭಾಗ ನೀಡಲಾಗಿದೆ

ಯಾರ ಹಕ್ಕುಗಳನ್ನು ಅವನು ತನ್ನ ಪಾದದಡಿಯಲ್ಲಿ ತಿಳದನೋ, ಮತ್ತು ಯಾರ ದೇಶವನ್ನು ಮರುಭೂಮಿಯನ್ನಾಗಿ ಮಾಡಿದನೋ ಆ ಭಾರತೀಯ ಪ್ರಜೆಗಳ ಹೆಸರಿನಲ್ಲಿ ನಾನು ಈತನನ್ನು ದೋಷಾರೋಪಣೆ ಮಾಡುತ್ತೇನೆ. ಕೊನೆಯದಾಗಿ ಮಾನವ ಸ್ವಭಾವ ದಂತೆ ಸ್ತ್ರೀ ಪುರುಷರ ಹೆಸರಿನಲ್ಲಿ ಎಲ್ಲಾ ವಯಸ್ಸಿನವರ ಹೆಸರಿನಲ್ಲಿ ಪ್ರತಿ ವರ್ಗಗಳ ಹೆಸರಿನಲ್ಲಿ ನಾನು ಎಲ್ಲರ ಸಾಮಾನ್ಯ ಶತೃವನ್ನು ಮತ್ತು ದಬ್ಬಾಳಿಕೆಗಾರರನ್ನು ದೋಷಾರೋಪಣೆ ಮಾಡುತ್ತೇನೆ.

ಇಲ್ಲಿ ಒಂದು ಪ್ರಮುಖ ಸಮಸ್ಯೆ ಏನಂದರೆ ಬ್ರಾಹ್ಮಣ ಪಂಡಿತರು ವಿವಿಧ **ಧರ್ಮಶಾಸ್ತ್ರ**ದ ಕಲ್ಪನೆಗಳನ್ನು ಅನುಸರಿಸಿ ಸ್ಥಳೀಯ ಕಾನೂನುಗಳಿಗೆ ವಿಭಿನ್ನ ವ್ಯಾಖ್ಯಾನಗಳನ್ನು ನೀಡಲಾರಂಭಿಸಿದರು. ಇದರಲ್ಲಿ ಏಕರೂಪತೆಯನ್ನು ತರಲು 1775ರಲ್ಲಿ ಹನ್ನೊಂದು ಜನ ಪಂಡಿತರನ್ನು ಹಿಂದೂ ಕಾನೂನುಗಳ ಸಂಹಿತೆಯನ್ನು ತಯಾರಿಸಬೇಕೆಂದು ಕೇಳಿದರು. ಎನ್.ಬಿ. ಹಾಲ್ಹೆಡ್ ಈ ನ್ಯಾಯ ಸಂಹಿತೆಯನ್ನು ಇಂಗ್ಲೀಷಿಗೆ ಅನುವಾದಿಸಿದರು. 1778ರಲ್ಲಿ ಯೂರೋಪಿಯನ್ ನ್ಯಾಯಾಧೀಶರಿಗೆ ಉಪಯೋಗವಾಗುವ ರೀತಿಯಲ್ಲಿ ಮುಸ್ಲಿಂ ಕಾನೂನುಗಳ ಸಂಹಿತೆಯನ್ನು ಸಹ ತಯಾರಿಸಲಾಯಿತು. 1773 ರ ರೆಗ್ಯುಲೇಟಿಂಗ್ ಕಾಯ್ದೆಯ ಅಡಿಯಲ್ಲಿ ಹೊಸ ಸುಪ್ರೀಂಕೋರ್ಟ್‌ನ್ನು ಸ್ಥಾಪಿಸಲಾಯಿತು. ಆದರೆ ಕೆಳಗಿನ ತೀರ್ಪುಗಳ ಮೇಲೆ ಮೇಲ್ಮನವಿ ಮಾಡಿಕೊಳ್ಳಲು ಸದರ್ ನಿಜಾಮತ್ ಅದಾಲತ್ ಎನ್ನುವ ಹೊಸ ಮೇಲ್ಮನವಿ ನ್ಯಾಯಾಲಯವನ್ನು ಕಲ್ಕತ್ತಾದಲ್ಲಿ ಸ್ಥಾಪಿಸಲಾಯಿತು.

ಭಾರತದೇಶದಲ್ಲಿ ಜಿಲ್ಲೆಯ ಉನ್ನತ ಅಧಿಕಾರಿ ಕಲೆಕ್ಟರ್ ಆಗಿದ್ದನು. ಆ ಹೆಸರು ಸೂಚಿಸುವಂತೆ ಕಂದಾಯ ಮತ್ತು ತೆರಿಗೆಗಳನ್ನು ಸಂಗ್ರಹಿಸುವುದು ಮತ್ತು ನ್ಯಾಯಾಧೀಶರು , ಪೋಲೀಸ್ ಅಧಿಕಾರಿಗಳು ಹಾಗೂ ದಾರೋಗಾಗಳ ಸಹಾಯದಿಂದ ತನ್ನ ಜಿಲ್ಲೆಯ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು ಆತನ ಮುಖ್ಯ ಕೆಲಸ. ಆತನ ಕಛೇರಿಯಾದ ಕಲೆಕ್ಟರೇಟ್ - ಅಧಿಕಾರಕ್ಕೆ ಹಾಗೂ ವೈಭವಕ್ಕೆ ಕೇಂದ್ರ ಸ್ಥಾನವಾಗಿ ಬದಲಾಗಿ ಅದು ನಿಧಾನವಾಗಿ ಆ ಅಧಿಕಾರ ಪಡೆದಿರುವವರ ಸ್ಥಾನಕ್ಕೆ ಸ್ಥಿರವಾಗಿ ಬದಲಾಯಿತು.

### ಕಂಪನಿ ಸೈನ್ಯ

ಭಾರತದೇಶದಲ್ಲಿ ವಸಾಹತುಶಾಹಿಯು ಆಡಳಿತ ಮತ್ತು ಸುಧಾರಣೆಯಲ್ಲಿ ಕೆಲವು ಹೊಸ ಕಲ್ಪನೆಗಳನ್ನು ತಂದಿತು. ಆದರೆ ಅದರ ಶಕ್ತಿಯು ಅದರ ಮಿಲಿಟರಿ ಬಲದ ಮೇಲೆ ಆಧಾರಪಟ್ಟಿದೆ. ಮೊಘಲ್ ಸೈನ್ಯವು ಮುಖ್ಯವಾಗಿ ಅಶ್ವದಳ (**ಸವಾರ್ಸ್** : ಕುದುರೆಯ ಮೇಲೆ ಕುಳಿತು ಯುದ್ಧ ಮಾಡುವ ತರಬೇತಿ ಪಡೆದ ಸೈನಿಕರು) ಮತ್ತು ಪದಾತಿದಳ ಎಂದರೆ ಪೈದಲ್ (ಕಾಲ್ನಡಿಗೆ) ಸೈನಿಕರನ್ನು ಒಳಗೊಂಡಿತ್ತು. ಅವರಿಗೆ ಬಿಲ್ವಿದ್ಯೆ (ತೀರ್-ಅಂದಾಜೀ), ಕತ್ತಿಯ ಬಳಕೆಯಲ್ಲಿ ತರಬೇತಿ ನೀಡಲಾಗಿತ್ತು. ಅಶ್ವದಳದ ಮೇಲೆ ಪ್ರಾಬಲ್ಯ ಸಾಧಿಸಿದ್ದರಿಂದ ಮೊಘಲ್ ರಾಜ್ಯವು ಶಿಕ್ಷಣ ಪಡೆದ ದೊಡ್ಡ ಪದಾತಿದಳದ ಅವಶ್ಯಕತೆ ಇದೆಯೆಂದು ಅಷ್ಟಾಗಿ ಭಾವಿಸಲಿಲ್ಲ. ಗ್ರಾಮೀಣ ಪ್ರದೇಶಗಳು ಹೆಚ್ಚಿನ ಸಂಖ್ಯೆಯಲ್ಲಿ ಶಸ್ತ್ರಸಜ್ಜಿತ ರೈತರನ್ನು ಹೊಂದಿರುವುದಲ್ಲದೆ ಸ್ಥಳೀಯ ಜಮೀನ್ದಾರರು ಮೊಘಲರಿಗೆ ಹೆಚ್ಚಾಗಿ ಪದಾತಿದಳ ಸೈನಿಕರನ್ನು (ಪೈದಲ್) ಪೂರೈಸುತ್ತಿದ್ದರು.

ಅವಧ್ ಮತ್ತು ಬನಾರಸ್‌ನಂತಹ ಮೊಘಲ್ ಉತ್ತರಾಧಿಕಾರಿಗಳ ರಾಜ್ಯಗಳು ರೈತರನ್ನು ತಮ್ಮ ಸೈನ್ಯದೊಳಕ್ಕೆ ನೇಮಿಸಿಕೊಳ್ಳುವುದು, ಅವರಿಗೆ ವೃತ್ತಿಪರ ಸೈನಿಕ ಶಿಕ್ಷಣ ನೀಡಲು ಪ್ರಾರಂಭಿಸಿದ್ದರಿಂದ ಹದಿನೆಂಟನೆ ಶತಮಾನದಲ್ಲಿ ಒಂದು ಬದಲಾವಣೆ ಸಂಭವಿಸಿತು. ಈಸ್ಟ್ ಇಂಡಿಯಾ ಕಂಪನಿ ಸಿಪಾಯಿ ಸೈನ್ಯ (ಭಾರತೀಯ ಪದ ಸಿಪಾಹಿ ಇಂದ - ಎಂದರೆ ಸೈನಿಕ ಎಂದರ್ಥ) ಎಂದು ಕರೆಯಲ್ಪಡುವ ತನ್ನ ಸ್ವಂತ ಸೈನ್ಯದ ನೇಮಕಾತಿಯನ್ನು ಪ್ರಾರಂಭಿಸಿದಾಗ ಸಹ ಇದರ ವಿಧಾನವನ್ನು ಅನುಸರಿಸಿತು.

1820 ರ ದಶಕದಿಂದ ಯುದ್ಧ ತಂತ್ರಜ್ಞಾನ ಬದಲಾದಂತೆಲ್ಲಾ ಕಂಪನಿಯ ಸೈನ್ಯದಲ್ಲಿ ಅಶ್ವದಳದ ಅವಶ್ಯಕತೆ ಕಡಿಮೆಯಾಯಿತು. ಏಕೆಂದರೆ ಬ್ರಿಟೀಷರು ಬರ್ಮಾ, ಆಫ್ಘನಿಸ್ತಾನ್, ಈಜಿಪ್ಟ್ ದೇಶಗಳೊಂದಿಗೆ ಹೋರಾಡುವಾಗ ಅಲ್ಲಿಯ ಸೈನಿಕರು **ಮಸ್ಕಟ್** (ಹೆಗಲಿಗೆ ಹಾಕಿಕೊಂಡು ಬಳಸುವ ತುಪಾಕಿ) ಮತ್ತು **ಮ್ಯಾಚ್‌ಲಾಕ್**‌ಗಳನ್ನು ( ಪೌಡರ್ ತುಂಬಿ ಬೆಂಕಿಕಡ್ಡಿಯಿಂದ ಹೊತ್ತಿಸುವ ಹಳೆಯಕಾಲದ ತುಪಾಕಿ) ಉಪಯೋಗಿಸುತ್ತಿದ್ದರು. ಕಂಪನಿಯ ಸೈನ್ಯದ ಸೈನಿಕರು ಬದಲಾಗುತ್ತಿರುವ ಮಿಲಿಟರಿ ಅವಶ್ಯಕತೆಗಳೊಂದಿಗೆ ಹೆಜ್ಜೆ ಹಾಕಬೇಕಾಗಿತ್ತು. ಪದಾತಿದಳದ ವಿಭಾಗ ಈಗ ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯಿತು.

**ಧರ್ಮಶಾಸ್ತ್ರಗಳು** : ಕ್ರಿಸ್ತ ಪೂರ್ವ 550 ರಿಂದ ಅನುಸರಿಸುತ್ತಿರುವ ಸಾಮಾಜಿಕ ನಿಯಮಗಳು ಮತ್ತು ನಡೆವಳಿಕೆಯ ನಿಯಮಾವಳಿಗಳನ್ನು ಸೂಚಿಸುವ ಸಂಸ್ಕೃತ ಗ್ರಂಥಗಳು


**ಸವಾರ್** : ಕುದುರೆಗಳ ಮೇಲೆ ಸವಾರರು

**ಮಸ್ಕಟ್** : ಪದಾತಿ ಸೈನಿಕರು ಬಳಸುವ ಭಾರವಾದ ಗನ್

**ಮ್ಯಾಚ್‌ಲಾಕ್** : ತುಪಾಕಿಯಲ್ಲಿ ಪುಡಿಯನ್ನು ತುಂಬಿ ಬೆಂಕಿಕಡ್ಡಿಯಿಂದ ಹೊತ್ತಿಸುವ ಹಳೆಯ ಕಾಲದ ತುಪಾಕಿ



https://amaravathiteacher.com



*ಚಿತ್ರ-16 : ಕಂಪನಿ ಸೇವೆಯಲ್ಲಿ ಬೆಂಗಾಲ್ ಸವಾರ್ (ಕುದುರೆ ಸವಾರ) ಅಜ್ಞಾತ ಭಾರತೀಯ ಚಿತ್ರಕಾರ 1780*
ಮರಾಠರು, ಮೈಸೂರು ಆಡಳಿತಗಾರರೊಂದಿಗೆ ಯುದ್ದಗಳ ನಂತರ ಕಂಪನಿ ಅಶ್ವಸೈನ್ಯದ ಬಲವನ್ನು ಬಲಪಡಿಸುವ ಅವಶ್ಯಕತೆಯನ್ನು ಗುರ್ತಿಸಿತು.

ಹತ್ತೊಂಬತ್ತನೇ ಶತಮಾನದ ಆರಂಭದಲ್ಲಿ ಬ್ರಿಟೀಷರು ಏಕೀಕೃತ ಸೈನಿಕ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲು ಪ್ರಾರಂಭಿಸಿದರು, ಸೈನಿಕರು ಹೆಚ್ಚಾಗಿ ಯೂರೋಪಿಯನ್ ಶೈಲಿಯ ತರಬೇತಿ ಪಡೆಯುವುದರೊಂದಿಗೆ ಸೈನಿಕ ಕವಾಯಿತುಗಳು ಮತ್ತು ಶಿಸ್ತುಗಳು ಮೊದಲಿಗಿಂತ ಹೆಚ್ಚಾಗಿ ಅವರ ಜೀವನವನ್ನು ನಿಯಂತ್ರಿಸಲಾರಂಭಿಸಿದವು. ಸುಶಿಕ್ಷಿತರಾದ ಸೈನಿಕರನ್ನು ತಯಾರಿಸುವಲ್ಲಿ ಜಾತಿ ಮತ್ತು ಸಮುದಾಯಗಳ ಭಾವನೆಗಳನ್ನು ಕಡೆಗಣಿಸಿದ್ದರಿಂದ ಇದು ಆಗಾಗ್ಗೆ ಸಮಸ್ಯೆಗಳನ್ನು ಸೃಷ್ಟಿಸುತ್ತಿತ್ತು. ವ್ಯಕ್ತಿಗಳು ತಮ್ಮ ಜಾತಿ ಮತ್ತು ಧಾರ್ಮಿಕ ಭಾವನೆಗಳನ್ನು ಅಷ್ಟು ಸುಲಭವಾಗಿ ಬಿಟ್ಟುಕೊಡಲು ಸಾಧ್ಯವೇ? ಅವರು ಕೇವಲ ಸೈನಿಕರು ಮಾತ್ರವೇನಾ? ಸಮುದಾಯಗಳ ಸದಸ್ಯರಲ್ಲವೇ?

ಸಿಪಾಯಿಗಳಿಗೆ ಏನು ಅನಿಸಿತು? ನಾವು ಯಾರು ಎಂಬ ಕಲ್ಪನೆಯು ಅಂದರೆ - ಅವರ ಜೀವನದಲ್ಲಾದ ಬದಲಾವಣೆಗಳಿಗೆ ಮತ್ತು ಗುರುತಿನ ಬಗ್ಗೆ ಅವರು ಹೇಗೆ ಪ್ರತಿಕ್ರಿಯಿಸಿದರು? 1857 ರ ದಂಗೆಯು ನಮಗೆ ಸಿಪಾಯಿಗಳ ಪ್ರಪಂಚದ ಕುರಿತು ಒಂದು ಸಂಗ್ರಹ ಅವಲೋಕನವನ್ನು ನೀಡುತ್ತದೆ. ಈ ದಂಗೆಯ ಬಗ್ಗೆ ನೀವು 5ನೇ ಅಧ್ಯಾಯದಲ್ಲಿ ಓದುತ್ತೀರಿ.

## ಉಪಸಂಹಾರ

ಹೀಗೆ ಈಸ್ಟ್ ಇಂಡಿಯಾ ಕಂಪನಿಯು ಒಂದು ವ್ಯಾಪಾರ ಸಂಸ್ಥೆಯಿಂದ ಒಂದು ಪ್ರಾದೇಶಿಕ ವಸಾಹತುಶಾಹಿ ಶಕ್ತಿಯಾಗಿ ಪರಿವರ್ತನೆಯಾಯಿತು. 19ನೇ ಶತಮಾನದ ಆರಂಭದಲ್ಲಿ ಹೊಸ ಉಗಿ ಯಂತ್ರಗಳ ಆಗಮನವು ಕೂಡಾ ಈ ಪ್ರಕ್ರಿಯೆಗೆ ನೆರವಾಯಿತು. ಅಲ್ಲಿಯವರೆಗೆ ಸಮುದ್ರದ ಮೂಲಕ ಭಾರತಕ್ಕೆ ಪ್ರಯಾಣಿಸಲು ಆರರಿಂದ ಎಂಟು ತಿಂಗಳವರೆಗೆ ಸಮಯ ತೆಗೆದುಕೊಳ್ಳುತ್ತಿತ್ತು. ಉಗಿ ಹಡಗುಗಳು ಈ ಪ್ರಯಾಣವನ್ನು ಮೂರು ವಾರಗಳಿಗೆ ಕಡಿಮೆ ಮಾಡುವುದರಿಂದ ಹೆಚ್ಚಿನ ಬ್ರಿಟೀಷರು ಮತ್ತು ಅವರ ಕುಟುಂಬಗಳು ಭಾರತದಂತಹ ದೂರದ ದೇಶಕ್ಕೆ ಬರಲು ಅನವು ಮಾಡಿಕೊಟ್ಟಿತು.

1857 ರ ಹೊತ್ತಿಗೆ ಕಂಪನಿಯು ಭಾರತೀಯ ಉಪಖಂಡದ ಸುಮಾರು 63 ಪ್ರತಿಶತದಷ್ಟು ಭೂ ಪ್ರದೇಶ ಮತ್ತು 78 ಪ್ರತಿಶತ ಜನಸಂಖ್ಯೆಯ ಮೇಲೆ ನೇರ ಆಡಳಿತಕ್ಕೆ ತಂದಿತು. ದೇಶದ ಉಳಿದ ಪ್ರದೇಶ ಮತ್ತು ಜನಸಂಖ್ಯೆಯ ಮೇಲೆ ಅದರ ಪರೋಕ್ಷ ಪ್ರಭಾವದೊಂದಿಗೆ ಸೇರಿ ಈಸ್ಟ್ ಇಂಡಿಯ ಕಂಪನಿಯು ವಾಸ್ತವಿಕವಾಗಿ ಇಡೀ ಭಾರತದೇಶವನ್ನು ತನ್ನ ನಿಯಂತ್ರಣದಲ್ಲಿ ತಂದಿತು.



https://amaravathiteacher.com

## ಮತ್ತೊಂದು ಕಡೆ

### ದಕ್ಷಿಣ ಆಫ್ರಿಕಾದಲ್ಲಿ ಗುಲಾಮರ ವ್ಯಾಪಾರ



ಹದಿನೇಳನೇ ಶತಮಾನದಲ್ಲಿ ಡಚ್ ವ್ಯಾಪಾರ ಹಡಗುಗಳು ದಕ್ಷಿಣ ಆಫ್ರಿಕಾವನ್ನು ತಲುಪಿದವು. ಶೀಘ್ರದಲ್ಲಿಯೇ ಗುಲಾಮ ವ್ಯಾಪಾರ ಪ್ರಾರಂಭವಾಯಿತು. ಜನರನ್ನು ಸೆರೆ ಹಿಡಿದು ಸರಪಳಿಯಿಂದ ಬಂಧಿಸಿ ಗುಲಾಮರ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಲಾಯಿತು. 1834ರಲ್ಲಿ ಗುಲಾಮಗಿರಿ ಕೊನೆಗೊಂಡಾಗ ಆಫ್ರಿಕಾದ ದಕ್ಷಿಣದ ತುದಿಯಾದ ಕೇಪ್‌ನಲ್ಲಿ 36,774 ಜನರು ಖಾಸಗಿ ಸ್ವಾಮ್ಯದ ಗುಲಾಮರು ಇದ್ದರು.

1824ರಲ್ಲಿ ಒಬ್ಬ ಕೇಪ್ ಸಂದರ್ಶಕನು ಗುಲಾಮರ ಹರಾಜಿನಲ್ಲಿ ತಾನು ಕಂಡದ್ದನ್ನು ಕುರಿತು ಭಾವುಕತೆಯಿಂದ ಹೀಗೆ ವರ್ಣಿಸಿದನು :

ಪಶುಗಳು, ಜಾನುವಾರು ಸಾಕಣೆ ಮುಂತಾದವುಗಳನ್ನು ಹರಾಜಿನ ಮೂಲಕ ವಿಕ್ರಯಿಸುವುದು ತಿಳಿದಿದೆ ...... ನಾವು ವಯಸ್ಕ ಎತ್ತುಗಳನ್ನು ಸಂಗ್ರಹಿಸುವ ಉದ್ದೇಶದಿಂದ ನಮ್ಮ ಬಂಡಿಯನ್ನು ನಿಲ್ಲಿಸಿದೆವು. ಆ ಜಾನುವಾರುಗಳ ನಡುವೆ ಒಬ್ಬ ಗುಲಾಮ ಸ್ತ್ರೀ ಮತ್ತು ಆಕೆಯ ಮೂವರು ಮಕ್ಕಳು ಸಹ ಇದ್ದರು. ರೈತರು ಅವರನ್ನು ಪಶುಗಳ ತಲೆಗಳನ್ನು ಪರೀಕ್ಷಿಸಿದಂತೆ ಪರೀಕ್ಷಿಸಲಾರಂಭಿಸಿದರು. ಅವರನ್ನು ಬೇರೆ ಬೇರೆಯಾಗಿ ವಿವಿಧ ಖರೀದಿದಾರರಿಗೆ ಮಾರಾಟ ಮಾಡಲಾಯಿತು. ತಾಯಿಯ ಕಣ್ಣೀರು, ಆತಂಕ, ಯಾತನೆ ........ ಆಕೆ ತನ್ನ ಮಕ್ಕಳ ಕಡೆ ನೋಡುವ ಹೃದಯ ವಿದ್ರಾವಕ ನೋಟ - ನಿರಾಡಂಬರವಾದ ಆ ಬಡ ಮಕ್ಕಳು ದುಃಖದಿಂದ ಪರಧ್ಯಾನವಾಗಿ ಮತ್ತು ಮೌನವಾಗಿ ತನ್ನ ತಾಯಿಯನ್ನು ತಬ್ಬಿ ಕೊಳ್ಳುವುದು........ ನೋಡುವ ವೀಕ್ಷಕರ ಮುಖಗಳಲ್ಲಿ ದುಃಖದ ಬದಲಾಗಿ ಹಾಸ್ಯದ ಧೋರಣೆ ಕಂಡು ಬಂದಿತು.

ದ ಚೈಲ್ಡ್ ದಟ್ ಬೈಂಡ್ ಅಜ್ : ಎ ಹಿಸ್ಟರೀ ಆಫ್ ಸ್ಲೇವರಿ ಅಟ್ ದಿ ಕೇಪ್ : *,1996* ನಿಂದ ನಿಗೆಲ್ ವಾರ್ಡನ್‌ನಲ್ಲಿ ಉಲ್ಲೇಖಿಸಲಾಗಿದೆ

### ನಾವು ಊಹಿಸೋಣ

ನೀನು 18ನೇ ಶತಮಾನದ ಕೊನೆಯಲ್ಲಿ ಅಥವಾ 19ನೇ ಶತಮಾನದ ಆರಂಭದಲ್ಲಿ ಇಂಗ್ಲೆಂಡಿನಲ್ಲಿ ವಾಸಿಸುತ್ತಿದ್ದೀಯ. ಬ್ರಿಟೀಷರ ವಿಜಯಗಳ ಕುರಿತು ನೀನು ಹೇಗೆ ಪ್ರತಿಕ್ರಿಯಿಸುತ್ತೀಯಾ? ನೀನು ಅನೇಕ ಅಧಿಕಾರಿಗಳು ತರುತ್ತಿರುವ ಅಪಾರ ಸಂಪತ್ತಿನ ಬಗ್ಗೆ ಓದಿದ್ದೀಯ ಎಂದು ನೆನಪಿರಲಿ.

### ನೆನಪಿಸಿಕೊಳ್ಳೋಣ

1. ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ.

| | |
|---|---|
| ದಿವಾನಿ | ಟಿಪ್ಪು ಸುಲ್ತಾನ್ |
| "ಟೈಗರ್ ಆಫ್ ಮೈಸೂರು" | ಭೂ ಕಂದಾಯ ವಸೂಲು ಮಾಡುವ ಅಧಿಕಾರ |
| ಫೌಜ್‌ದಾರಿ ಅದಾಲತ್ | ಸಿಪಾಯಿ |
| ರಾಣಿ ಚೆನ್ನಮ್ಮ | ಕ್ರಿಮಿನಲ್ ನ್ಯಾಯಾಲಯ |
| ಸಿಪಾಹಿ | ಕಿತ್ತೂರಿನಲ್ಲಿ ಬ್ರಿಟೀಷ್ ವಿರುದ್ಧ ಚಳುವಳಿ |

2. ಬಿಟ್ಟ ಸ್ಥಳಗಳನ್ನು ತುಂಬಿರಿ :

   (ಎ) ಬ್ರಿಟೀಷರ ಬಂಗಾಳದ ವಿಜಯವು ................ ಕದನದಿಂದ ಪ್ರಾರಂಭವಾಯಿತು.

   (ಬಿ) ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ್ ................ಆಡಳಿತಗಾರರು.



https://amaravathiteacher.com

(ಸಿ) ಡಲ್ಹೌಸಿ ಜಾರಿಗೆ ತಂದ ಸಿದ್ಧಾಂತ ................

(ಡಿ) ಮರಾಠಾ ರಾಜ್ಯಗಳು ಮುಖ್ಯವಾಗಿ ಭಾರತದೇಶದ ...........ಭಾಗದಲ್ಲಿ ಇವೆ.

3. ಕೆಳಗಿನ ವಾಕ್ಯಗಳು ಸರಿಯೋ ತಪ್ಪೋ ತಿಳಿಸಿ.

(ಎ) 18ನೇ ಶತಮಾನದಲ್ಲಿ ಮೊಘಲ್ ಸಾಮ್ರಾಜ್ಯವು ಪ್ರಬಲವಾಯಿತು.

(ಬಿ) ಭಾರತದೇಶದೊಂದಿಗೆ ವ್ಯಾಪಾರ ಮಾಡಿದ ಏಕೈಕ ಕಂಪನಿ ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪನಿ ಮಾತ್ರವೇ.

(ಸಿ) ಮಹಾರಾಜ ರಂಜಿತ್ ಸಿಂಗ್ ಪಂಜಾಬಿನ ದೊರೆ.

(ಡಿ) ಬ್ರಿಟೀಷರು ತಾವು ವಶಪಡಿಸಿಕೊಂಡ ಪ್ರದೇಶಗಳಲ್ಲಿ ಆಡಳಿತಾತ್ಮಕ ಬದಲಾವಣೆಗಳನ್ನು ತರಲಿಲ್ಲ

## ಚರ್ಚಿಸೋಣ

4. ಯೂರೋಪಿಯನ್ ವ್ಯಾಪಾರ ಕಂಪನಿಗಳನ್ನು ಭಾರತಕ್ಕೆ ಆಕರ್ಷಿಸಿದ್ದು ಯಾವುದು?

5. ಬಂಗಾಳದ ನವಾಬರು ಮತ್ತು ಈಸ್ಟ್ ಇಂಡಿಯಾ ಕಂಪನಿಯ ನಡುವಿನ ಸಂಘರ್ಷಕ್ಕೆ ಕಾರಣವಾದ ಅಂಶಗಳು ಯಾವುವು?

6. ದಿವಾನೀ ನಿರ್ವಹಣೆಯು ಈಸ್ಟ್ ಇಂಡಿಯಾ ಕಂಪನಿಗೆ ಹೇಗೆ ಉಪಯೋಗವಾಯಿತು?

7. ಸಹಾಯಕ ಸೈನ್ಯ ಪದ್ಧತಿಯನ್ನು ಕುರಿತು ವಿವರಿಸಿರಿ.

8. ಭಾರತೀಯ ಆಡಳಿತಗಾರರಿಗಿಂತ ಕಂಪನಿ ಆಡಳಿತ ಯಾವ ರೀತಿ ಭಿನ್ನವಾಗಿದೆ?

9. ಕಂಪನಿಯ ಸೈನ್ಯದ ಸಂಯೋಜನೆಯಲ್ಲಿ ಸಂಭವಿಸಿದ ಬದಲಾವಣೆಗಳನ್ನು ವಿವರಿಸಿರಿ.

## ಹೀಗೆ ಮಾಡೋಣ

10. ಬ್ರಿಟೀಷರು ಬಂಗಾಳವನ್ನು ವಶಪಡಿಸಿಕೊಂಡ ನಂತರ ಕಲ್ಕತ್ತಾ ಒಂದು ಚಿಕ್ಕ ಹಳ್ಳಿಯಿಂದ ದೊಡ್ಡ ನಗರವಾಗಿ ಬೆಳೆಯಿತು. ವಸಾಹತುಶಾಹಿ ಆಡಳಿತದ ಕಾಲದಲ್ಲಿ ಈ ನಗರದಲ್ಲಿನ ಯೂರೂಪಿಯನ್ನರು ಮತ್ತು ಭಾರತೀಯರ ಸಂಸ್ಕೃತಿ, ವಾಸ್ತುಶಿಲ್ಪ ಹಾಗೂ ಜೀವನದ ಕುರಿತು ತಿಳಿದುಕೊಳ್ಳಿ

11. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಕಥೆಗಳು, ಕವನಗಳು ಮತ್ತು ಮಾಹಿತಿಯನ್ನು ಸಂಗ್ರಹಿಸಿರಿ. ಝಾನ್ಸಿಯ ರಾಣಿ, ಮಹಾರಾಜಿ ಸಿಂಧಿಯಾ, ಹೈದರ್ ಅಲಿ, ಮಹಾರಾಜಾ ರಂಜಿತ್‌ಸಿಂಗ್, ಲಾರ್ಡ್ ಡಲ್ಹೌಸಿ ಅಥವಾ ನಿಮ್ಮ ಪ್ರಾಂತದ ಯಾವುದೇ ಇತರ ಸಮಕಾಲೀನ ಆಡಳಿತಗಾರ.



https://amaravathiteacher.com